ಅಖಿಲ ಕರ್ಣಾಟಕ ಸಂಸ್ಕೃತ ಪರಿಷತ್ತಿನ

ಐದನೆಯ ಸಮ್ಮೇಳನ

ತಾ|| 8, 9, 10 ಅಕ್ಟೋಬರ್, 1984

ಆದಿಚುಂಚನಗಿರಿ ಕ್ಷೇತ್ರದಲ್ಲಿ

ವಿದ್ವಾನ್ ಎನ್. ರಂಗನಾಥಶರ್ಮಾ

ಅವರ

ಅಧ್ಯಕ್ಷ ಭಾಷಣ

ಅಖಿಲ ಕರ್ಣಾಟಕ ಸಂಸ್ಕೃತ ಪರಿಷತ್ತಿನ ಪ್ರಕಾಶನ

॥ ಶ್ರೀಃ ॥

ಅಖಿಲ ಕರ್ಣಾಟಕ ಸಂಸ್ಕೃತ ಪರಿಷತ್

ಐದನೆಯ ಸಮ್ಮೇಳನ

ವಿದ್ವಾನ್ ರಂಗನಾಥ ಶರ್ಮಾ ಅವರ

ಅಧ್ಯಕ್ಷ ಭಾಷಣ

(ಕನ್ನಡಾನುವಾದ : ಕೆ. ಎಸ್. ಕಣ್ಣನ್)

ಕವೀಂದ್ರಾಣಾಂ ಚೇತಸ್ಸ್ಫುರಣಮುಪಕಲ್ಪ್ಯಾಪ್ರತಿಹತಂ
ಹತಂ ಲೋಕಂ ಜಾಡ್ಯಾದಮೃತರಸಸೇಕೇನ ನಿಭೃತಮ್ ।
ಸಮುಜ್ಜೀವ್ಯ ಶ್ರೇಯಸ್ಸುಭಗಚತುರಸ್ರಂ ವಿದಧತೀ
ಜಯತ್ಯೇಕಾ ವಾಣೀ ನಿಖಿಲಭುವನಾನಂದಜನನೀ ॥

ಸಂಮಾನ್ಯ ರಾಜ್ಯಪಾಲರಾದ ಶ್ರೀ ಎ. ಎನ್. ಬ್ಯಾನರ್ಜಿ ಮಹೋದಯರೇ, ಆದಿಚುಂಚನಗಿರಿಕ್ಷೇತ್ರದ ಮಠದ ಪೀಠಾಧ್ಯಕ್ಷರಾದ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳವರೇ, ಅಖಿಲ ಕರ್ಣಾಟಕ ಸಂಸ್ಕೃತ ಪರಿಷತ್ತಿನ ಅಧ್ಯಕ್ಷರೇ, ಅಧಿಕಾರಿಗಳೇ, ಉಪಸ್ಥಿತರಾದ ವಿದ್ವಾಂಸರೇ, ಸಜ್ಜನರೇ, ಮಹಿಳೆಯರೇ ಹಾಗೂ ಮಿತ್ರರೇ,

ಅಖಿಲಕರ್ಣಾಟಕಸಂಸ್ಕೃತಪರಿಷತ್ತು ಆಯೋಜಿಸಿರುವ ಈ ಐದನೆಯ ಸಂಸ್ಕೃತ ಪರಿಷತ್ ಸಮ್ಮೇಳನವು ಪ್ರಕೃತಿಸುಂದರವಾದ ಈ ಪವಿತ್ರ ಆದಿಚುಂಚನಗಿರಿ ಕ್ಷೇತ್ರದಲ್ಲಿ ಜರುಗುತ್ತಿರುವುದು ಸಂಸ್ಕೃತದಲ್ಲಿ ಪ್ರೀತಿಯುಳ್ಳವರಿಗೆ ಬಹಳ ಸಂತೋಷ ವನ್ನೇ ಉಂಟುಮಾಡುವಂತಹುದು. ಈ ಮಹಾಸಮ್ಮೇಳನದ ಅಧ್ಯಕ್ಷತೆಗೆ ನನ್ನನ್ನು ಆಯ್ಕೆ ಮಾಡಿದ್ದೀರಿ. ಸಂಸ್ಕೃತ ಪರಿಷತ್ತಿನ ಅಧ್ಯಕ್ಷರು, ಕಾರ್ಯಕರ್ತರು ಹಾಗೂ ತಾವೆಲ್ಲರೂ ನನ್ನ ವಿಷಯದಲ್ಲಿ ಹೊಂದಿರುವ ಸ್ನೇಹ-ಔದಾರ್ಯಗಳಲ್ಲದೆ ಈ ಆಯ್ಕೆ ಯಲ್ಲಿ ಬೇರೆ ಕಾರಣವನ್ನು ನಾ ಕಾಣೆ. ನನಗಿಂತಲೂ ಜ್ಞಾನವೃದ್ಧರುಂಟು, ವಯೋವೃದ್ಧರುಂಟು, ವಿದ್ವತ್ತಿನಲ್ಲಿ ಅಗ್ರಗಣ್ಯರೆನಿಸುವ ಪ್ರಾಜ್ಞರೂ ಉಂಟು.

ಹಾಗಿದ್ದರೂ ವಿಶ್ವಾಸಪೂರ್ಣವಾದ ಹಿರಿದಾದ ಗೌರವವನ್ನು ನನ್ನ ಬಗ್ಗೆ ತೋರಿದ್ದೀರಿ. ಅದಕ್ಕಾಗಿ ಇವರೆಲ್ಲರಿಗೂ ತಮಗೂ ನನ್ನ ಕೃತಜ್ಞತಾಪೂರ್ಣವಾದ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

'ಓಂಕಾರ ಏವ ಸರ್ವಾ ವಾಕ್, ಸೈಷಾ ಸ್ಪರ್ಶೋಷ್ಮಭಿರ್ವ್ಯಜ್ಯಮಾನಾ ಬಹ್ವೀ ನಾನಾರೂಪಾ ಭವತಿ' ಎಂದು ವೇದವಾಕ್ಯವಿದೆ. **'ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ'** ಎಂದು ಸ್ಮೃತಿವಚನವಿದೆ. **'ಸಿದ್ಧೇ ಶಬ್ದಾರ್ಥ ಸಂಬಂಧೇ, ಸಿದ್ಧಂ ತು ನಿತ್ಯಶಬ್ದತ್ವಾತ್'** ಎಂದು ಕಾತ್ಯಾಯನನ ವಾರ್ತಿಕವಿದೆ. **'ಅನಾದಿನಿಧನಂ ಬ್ರಹ್ಮ ಶಬ್ದತತ್ವಂ ಯದಕ್ಷರಮ್'** ಎಂಬ ವಾಕ್ಯಪದೀಯದ ಮಾತಿದೆ.

—ಇವೆಲ್ಲವೂ ಸಂಸ್ಕೃತ ಭಾಷೆಯನ್ನು ಕುರಿತಾಗಿಯೇ ಉಕ್ತವಾಗಿರುವುವೆಂಬುದು ಅವನ್ನು ಬಲ್ಲವರಿಗೆಲ್ಲಾ ತಿಳಿದಿರುವ ವಿಷಯವೇ. ಅಂತಹ ಈ ಸಂಸ್ಕೃತಭಾಷೆ ಸರ್ವವ್ಯಾಪಿ, ಎಲ್ಲ ವಿಜ್ಞಾನಗಳ ತಾಯಿಯೆಂಬುದನ್ನು ಭಗವಾನ್ ಭಾಷ್ಯಕಾರರ ಈ ಮಾತು ತೋರಿಸುತ್ತದೆ: **'ಮಹಾನ್ ಶಬ್ದಸ್ಯ ಪ್ರಯೋಗವಿಷಯಃ ಸಪ್ತದ್ವೀಪಾ ವಸುಮತೀ, ತ್ರಯೋ ಲೋಕಾಃ, ಚತ್ವಾರೋ ವೇದಾಃ, ಸಾಂಗಾಃ ಸರಹಸ್ಯಾಃ'** ಇತ್ಯಾದಿ. ಇಂದು ಸಂಸ್ಕೃತದಲ್ಲಿ ದೊರೆಯುತ್ತಿರುವಷ್ಟಿನ ಗ್ರಂಥರಾಶಿಯೇ ತನ್ನ ವಿಸ್ತಾರ, ಸಾರಶೀಲತೆಯೆಂಬಂಶಗಳಲ್ಲಿ ಇತರಭಾಷಾಗತಸಾಹಿತ್ಯವನ್ನೂ ಸಹ ಮೀರಿಸುತ್ತದೆಂದು ನಮ್ಮ ಮನಸ್ಸೇ ಚಕಿತವಾಗುತ್ತದೆ. ಪ್ರಾಚೀನರು ರಚಿಸಿದ ಗ್ರಂಥಗಳಲ್ಲಿ **'ಕತಿ ನಷ್ಟಾಃ, ಕತಿ ದಗ್ಧಾಃ, ಕತಿ ಶಿಷ್ಟಾಃ'** ಎಂದು ಸಹ ನಾವರಿಯೆವು. ರಾಜತರಂಗಿಣಿಯಲ್ಲಿ ಕಲ್ಹಣನು ಹೇಳಿಲ್ಲವೆ ?

'ಸಿಕಂದರಧರಾನಾಥೋ ಯವನೈಃ ಪ್ರೇರಿತಃ ಪುರಾ ।
ಪುಸ್ತಕಾನಿ ಚ ಸರ್ವಾಣಿ ತೃಣಾನ್ಯಗ್ನಿರಿವಾದಹತ್॥' ಎಂದು.

ಅಷ್ಟೇ ಅಲ್ಲದೆ ಅಷ್ಟಾಧ್ಯಾಯಿಯಲ್ಲಿ ಮತ್ತು ಉಣಾದಿಸೂತ್ರಗಳಲ್ಲಿ ವ್ಯುತ್ಪನ್ನವಾದ ಅನೇಕ ಶಬ್ದಗಳು ಇಂದು ದೊರೆಯುವ ಬಹುತೇಕ ಪುಸ್ತಕಗಳಲ್ಲಿ ಕಾಣಸಿಗವು. ಪ್ರಯೋಗದಲ್ಲಿರುವ ಶಬ್ದಗಳಿಗೆ ತಾನೆ ಅನ್ವಾಖ್ಯಾನವನ್ನು ವ್ಯಾಕರಣವು ಮಾಡುವಂತಹುದು ? 'ಬಳಕೆಯಲ್ಲೇ ಇದ್ದಿಲ್ಲದ ಶಬ್ದಗಳು'—ಎನ್ನುವುದು ಅಸಂಗತವಾದ ಮಾತೆನಿಸುತ್ತದೆ. ಆದ್ದರಿಂದ ಈಗ ಲಭ್ಯವಿರುವ ಗ್ರಂಥಗಳಲ್ಲಿ ದೊರೆಯುತ್ತಿಲ್ಲವಾದ, ಆದರೆ ವ್ಯುತ್ಪನ್ನವಾಗುತ್ತಿರುವ ಈ ಶಬ್ದರಾಶಿಯೇ ಲುಪ್ತವಾಗಿಹೋಗಿರುವ ಗ್ರಂಥನಿಚಯಕ್ಕೆ ಸೂಚಕವಾಗಿದೆ — ಹೊಗೆಯು ಬೆಂಕಿಯ ಅಸ್ತಿತ್ವಕ್ಕೆ ಹೇಗೋ ಹಾಗೆ.

ಸಂಸ್ಕೃತ ಭಾಷೆಯ ವ್ಯಾಪ್ತಿ

ಋಷಿಗಳು, ದಾರ್ಶನಿಕರು, ವೈದ್ಯರು ಮೊದಲಾದ ಶಾಸ್ತ್ರಕಾರರೂ ಕವಿಗಳೂ ಯಾವ ಭಾಷೆಯನ್ನು ನಲ್ಮೆಯಿಂದ ಆಡಿಸಿದರೋ, ಅಂತಹ ಈ ಸಂಸ್ಕೃತವು

ವ್ಯಾವಹಾರಿಕಭಾಷೆಯೂ ಆಗಿಯೇ ಇತ್ತೆನ್ನುವುದರಲ್ಲಿ ಸಂಶಯವೇ ಇಲ್ಲ. ಲೋಕದಲ್ಲಂತೂ, ವ್ಯವಹಾರದಿಂದ ದೂರವುಳಿದುಕೊಂಡು, ಜನೋಪಯೋಗಿಗ್ರಂಥಗಳಿಗಾಗಿ ಪಂಡಿತರು ಬಳಸುವಂತಹ ಭಾಷೆಯೊಂದೂ ಇರಲಾರದಷ್ಟೆ. 'ಭಾಷಣಾತ್ ಭಾಷಾ' ಎಂಬ ನಿರುಕ್ತಿಯೂ ಸಾಧಾರಣಜನರೂ ಆಡುತ್ತಿದ್ದರೆಂಬಂಶವನ್ನೇ ವ್ಯಂಜಿಸುತ್ತದೆ. ಆಚಾರ್ಯ ಪಾಣಿನಿಯು ಅಷ್ಟಾಧ್ಯಾಯಿಯಲ್ಲಿ ಸಂಸ್ಕೃತವನ್ನು ಭಾಷೆಯೆಂದೇ ವ್ಯವಹರಿಸುತ್ತಾನೆ. ಪಾಣಿನಿಗೂ ಹಿಂದಿನ ಕಾಲದಲ್ಲಿ ಭಾರತದಲ್ಲಿ ಸಂಸ್ಕೃತವನ್ನೇ ಜನರಾಡುತ್ತಿದ್ದರೆಂಬುದನ್ನು ಪ್ರಮಾಣಬದ್ಧವಾಗಿ ತೋರಿಸಲು ಶಕ್ಯವಿದೆ. ಅಷ್ಟೇ ಅಲ್ಲದೆ **ತಿಷ್ಠದ್ಗು, ವಹದ್ಗು, ಗೋಗೋಷ್ಠಂ, ಶಂಬಾಕರೋತಿ, ಉಷ್ಟ್ರಗೋಯುಗವ್**—ಮುಂತಾದ ಶಬ್ದಗಳು ರೈತಾಪಿ - ದನಗಾರ. ಸಿಪಾಯಿ - ಜೂಜುಕೋರರಲ್ಲಿ ಪ್ರಸಿದ್ಧವಿದ್ದು ಶಾಸ್ತ್ರಗ್ರಂಥಗಳ ವಸ್ತುವಿಗೆ ಸೇರವು. **ಪಾತ್ರೇಸಮಿತ** (ಕೂಳಬಾಕ), **ಗೇಹೇನರ್ದೀ** (ಅಂಜುಬುರುಕ), **ಗ್ರಾಮಸಂಡ** (ಹಳ್ಳಿತೊಣಪ), **ನಗರಕಾಕ** (ಪಟ್ಟಣದ ಕಾಗೆ), **ಅಶ್ನೀತಪಿಬತಾ** (ಸಾರ್ವಜನಿಕ ಭೋಜನ)—ಮುಂತಾದ ಶಬ್ದಗಳು ಅಷ್ಟಾಧ್ಯಾಯಿಯಲ್ಲಿ ವ್ಯುತ್ಪಾದಿತವಾಗಿವೆ: ಅವೆಲ್ಲವೂ ನಿತ್ಯಗಟ್ಟಲೆ ವ್ಯವಹಾರಕ್ಕೆ ಬರುವಂತಹುವೇ. **'ನ ಹಿ ಶಬ್ದಾಃ ಕ್ರಿಯಂತೇ, ಪ್ರಯುಕ್ತಾನಾಮಿದಮನ್ವಾಖ್ಯಾನಮ್'** (ಶಬ್ದಗಳನ್ನು ರಚಿಸುವುದಲ್ಲ, ಪ್ರಯೋಗದಲ್ಲಿರುವುದರ ಸ್ಪಷ್ಟೀಕರಣಕ್ಕಾಗಿ ಮಾತ್ರ ಇಲ್ಲಿ ಎತ್ತಿ ಹೇಳೋಣವಾಗಿದೆ,) ಎಂಬ ಮಹಾಭಾಷ್ಯಕಾರರ ಸ್ಪಷ್ಟೋಕ್ತಿ, ಹಳ್ಳಿಗಾಡು ಹೆಸರುಗಳ ನಿರ್ವಚನ, **'ಪ್ರಾಚ್ಯೇಷು', 'ಉದೀಚ್ಯೇಷು', 'ಕಂಬೋಜೇಷು'** ('ಪೂರ್ವದ ಕಡೆಯಲ್ಲಿ', 'ಉತ್ತರದಲ್ಲಿ', 'ಕಂಬೋಜ ದೇಶದಲ್ಲಿ') ಎಂದು ಮುಂತಾಗಿ ದೇಶಭೇದಾನುಸಾರ ಶಬ್ದಸ್ವರೂಪ ಮತ್ತು ಅರ್ಥಗಳಲ್ಲಿ ಭೇದ ತೋರಿಸುವಿಕೆ—ಇದೆಲ್ಲವೂ ಸಂಸ್ಕೃತ ಭಾಷೆಯ ಸ್ವಾಭಾವಿಕತೆ ಹಾಗೂ ವ್ಯಾವಹಾರಿಕತ್ವವನ್ನು ಸ್ಪಷ್ಟಪಡಿಸುತ್ತದೆಂದು ಹೇಳಿ ಈ ವಿಷಯವನ್ನು ಇಲ್ಲಿಗೆ ಬಿಡಬಹುದು.

ಸನಾತನವಾದ ಈ ದೇವವಾಣಿಯು ಚಿರಕಾಲದಿಂದಲೂ ಎಲ್ಲ ಋಷಿಜನರ ಮನೀಷೆಯನ್ನು ಪ್ರತಿಫಲಿಸುತ್ತ ಬಂದಿದೆ. ಬಾದರಾಯಣ, ಜೈಮಿನಿ, ಕಪಿಲ, ಗೌತಮ—ಮುಂತಾದ ಮುಖ್ಯ ದಾರ್ಶನಿಕರ ತಪೋವೈಭವವನ್ನು ತೋರ್ಪಡಿಸುತ್ತಿದೆ. ವ್ಯಾಸ, ವಾಲ್ಮೀಕಿ, ಭಾಸ, ಕಾಳಿದಾಸ, ಜಿನಸೇನ ಮುಂತಾದ ಕವಿಕೋಗಿಲೆಗಳನ್ನು ಹಾಡುವಂತೆ ಮಾಡುತ್ತ ಬಂದಿದೆ. ಜೈನ, ಬೌದ್ಧ, ಪಾಶುಪತ, ವೀರಶೈವ ಮುಂತಾದ ಶಾಸ್ತ್ರಗಳಲ್ಲಿ ಪರಿಣತರಾದವರನ್ನು ಪ್ರೇರಿಸುತ್ತಿದೆ. ವೈದ್ಯ, ಜ್ಯೌತಿಷ, ಗಜಶಾಸ್ತ್ರ, ಅಶ್ವಶಾಸ್ತ್ರ ಮುಂತಾದುವುಗಳಲ್ಲಿ ಪ್ರವೀಣರೆನಿಸಿದ ಚರಕ, ಆರ್ಯಭಟ ಮುಂತಾದ ಮೇಧಾವಂತರಿಗೆ ಸ್ಫೂರ್ತಿ ತುಂಬಿದೆ. ಆಸೇತುಹಿಮಾಚಲಪರ್ಯಂತ ಭಾರತೀಯರ ಹೊಸ ಹೊಸ ಪ್ರತಿಭೆಯನ್ನು ಉನ್ಮೀಲನಗೊಳಿಸುತ್ತಿದೆ. ಧರ್ಮವನ್ನು

ಧರಿಸಿದೆ. ಕರ್ಮದ ಮರ್ಮವನ್ನು ಅರುಹಿದೆ. ಕನ್ನಡ ಮುಂತಾದ ದೇಶಭಾಷೆಗಳ ಏಳ್ಗೆಯನ್ನು ಪುಷ್ಟೀಕರಿಸುತ್ತಿದೆ. ಭರತಖಂಡದ ಏಕತೆಯನ್ನು ಏಕರೂಪವಾದ ಶಿಷ್ಟಾಚಾರ - ಆಲೋಚನಾಸರಣಿಗಳಿಂದ—ವಜ್ರಲೇಪದಿಂದ ಹೇಗೋ ಹಾಗೆ—ಸಾಧಿಸುತ್ತ ಬೆಳಗಿ ಬರುತ್ತಿದೆ. ಎಲ್ಲ ಕಾಲದಲ್ಲಿಯೂ ಹೊಸದಾಗಿಯೇ ತೋರುವ ಈ ಪುರಾತನ ಭಾಷೆಯಿಂದ ಅದೆಷ್ಟು ಜನರು ಉದ್ಧಾರವಾದರು, ಎಷ್ಟು ಜನ ಪುಷ್ಟಿ ಪಡೆದರು, ಎಷ್ಟು ಮಂದಿ ಸಂತುಷ್ಟರಾದರು, ಅದೆಷ್ಟು ಜನ ನೆಮ್ಮದಿಯನ್ನು ಪಡೆಯುವಂತಾದರು, ಎಷ್ಟು ಜನ ಒಳ್ಳೆಯ ದಾರಿ ಕಂಡರು—ಎಂಬುದನ್ನು ನೂರು ವರ್ಷಗಳ ಆಯುಷ್ಯದಿಂದಲೂ ಎಣಿಸಲಾಗದು.

ಅಂತಹ ಈ ಸಂಸ್ಕೃತ ಭಾಷೆಯು ಕನ್ನಡ-ಮರಾಠಿ ಮುಂತಾದ ಎಲ್ಲ ದೇಶ ಭಾಷೆಗಳಲ್ಲಿ, ದೇಸೀ ಕಾವ್ಯ ಶಾಸ್ತ್ರಗಳಲ್ಲಿ ಹಾಗೂ ಆಚಾರ-ವಿಚಾರಗಳಲ್ಲಿ ಅಖಂಡ ಭರತಖಂಡವನ್ನೇ ಹಲವು ರೂಪುಗಳಿಂದ ವ್ಯಾಪಿಸಿದ್ದು, ಭಾರತೀಯ ಸಂಸ್ಕೃತಿಯ ಹರಿವಿನ ವಾಹಿನಿಯಾಗಿ, ಮಣಿಗಣಗಳಂತಿರುವ ಎಲ್ಲ ಭಾರತೀಯರನ್ನು ಧರಿಸುವ ಸೂತ್ರದಂತಿದ್ದು, ಭಗವಾನ್ ನಾರಾಯಣನ ಆಕೃತಿಯಂತೆ ವಿಶ್ವರೂಪ ಪ್ರಕಾಶಿನಿಯಾಗಿದ್ದು ಚಿರಕಾಲದಿಂದಲೂ ಬೆಳಗಿ ಹೊಳೆದಿದೆ.

ಸಂಸ್ಕೃತ ಮತ್ತು ಪ್ರಾಂತಭಾಷೆಗಳ ನಂಟು

ಕನ್ನಡ ಮುಂತಾದ ದೇಶಭಾಷೆಗಳು ಸಂಸ್ಕೃತದಿಂದ ಪುಷ್ಟಿಪಡೆದಿವೆಯೆಂಬು ದಂತೂ ನಿರ್ವಿವಾದ. ಹೇರಳವಾದ ಪ್ರಮಾಣದಲ್ಲಿ ಶಬ್ದಗಳನ್ನೂ, ಅಲಂಕಾರ-ವ್ಯಾಕರಣ-ವೇದಾಂತ ಮುಂತಾದ ಶಾಸ್ತ್ರಗಳ ವಿಷಯಗಳನ್ನೂ ಬಳುವಳಿಯಿತ್ತು ದೇಶೀಭಾಷೆಗಳ ವಾಙ್ಮಯವನ್ನು ಸಂಸ್ಕೃತವು ಸೊಂಪಾಗಿ ಬೆಳೆಸಿದೆಯೆಂಬುದು ಸೂರ್ಯನ ಬೆಳಕಿನಂತೆ ವಿವೇಕಿಗಳಿಗೆ ನಿಚ್ಚಳವಾಗಿ ತೋರುವುದು. ಪಂಪ-ಷಡಕ್ಷರ ದೇವ ಮುಂತಾದ ಕವಿಗಳು ಕನ್ನಡಕುಲಕ್ಕೇ ತಿಲಕಪ್ರಾಯರಾದವರು ; ಅವರುಗಳೆಲ್ಲ ಸಂಸ್ಕೃತಸಾಹಿತ್ಯದಲ್ಲಿ ಒಳ್ಳೇ ಪ್ರೌಢಿಮೆಯನ್ನೇ ಗಳಿಸಿದವರು. ನಾಗವರ್ಮ-ಭಟ್ಟಾ ಕಳಂಕರು ಕನ್ನಡ ವ್ಯಾಕರಣಶಾಸ್ತ್ರವನ್ನು ಸಂಸ್ಕೃತಭಾಷೆಯಲ್ಲಿ ರಚನೆಮಾಡಿದರು. ಹೀಗೆ ಕನ್ನಡರಾಜ್ಯದಲ್ಲಿ ಸಂಸ್ಕೃತ ಕನ್ನಡ ಭಾಷೆಗಳ ಅನ್ಯೋನ್ಯಸ್ನೇಹವು ಅವಿಚ್ಛಿನ್ನ ವಾಗಿ ಚಿರಕಾಲದಿಂದಲೂ ಬಾಳಿಬದುಕಿದೆ. ಹೀಗಿದ್ದರೂ ಸಹ ಕ್ಷೀರದಲ್ಲೂ ಕ್ಷಾರ ಕಾಣುವ ಕೆಲವರು ಸಂಸ್ಕೃತವಿರೋಧಿಗಳಾಗಿಕೊಂಡು, ಪ್ರೌಢಶಾಲೆಗಳಿಂದ ಈ ಭಾಷೆ ಯನ್ನು ತೊಲಗಿಸುವ ಬಯಕೆಯುಳ್ಳವರಾಗಿ ದೊಡ್ಡ ಕೋಲಾಹಲದೊಡನೆ ತಮ್ಮನ್ನು ಮೆರೆಯಿಸಿಕೊಂಡುದು ತಮಗೆಲ್ಲರಿಗೂ ತಿಳಿದದ್ದೇ. ಸೂಕ್ಷ್ಮಜ್ಞರು ಈ ವಿಷಯದಲ್ಲಿ ಉತ್ತರ-ಪ್ರತ್ಯುತ್ತರರೂಪವಾಗಿ ಬಹುವಾಗಿಯೇ ಹೋರಾಡಿದು ದುಂಟು, ಹೇರಳವಾಗಿ ಬರೆದುದುಂಟು, ಆಡಿದುದುಂಟು. ಈ ಜಗಳವು ಉಚ್ಚ ನ್ಯಾಯಾಲಯ, ಕೊನೆಗೆ ಪರಮೋಚ್ಚನ್ಯಾಯಾಲಯಗಳವರೆಗೂ ಹೋಯಿತೆಂದ

ಮೇಲೆ ಸಂಸ್ಕೃತವಿರೋಧಿಗಳ ಛಲದ ಪಟ್ಟು ಎಂತಹುದೆಂಬುದು ಎಲ್ಲರಿಗೂ ಅಚ್ಚರಿಯನ್ನೇ ತರುತ್ತದೆ. ಕೊನೆಗೂ ಬೆಂಕಿಯಲ್ಲಿ ಪುಟವಿಕ್ಕಿದ ಚಿನ್ನದ ಗಟ್ಟಿಯಂತೆ ಸಂಸ್ಕೃತವು ವಿರಾಜಿಸಿತೆಂಬುದು ಅತ್ಯಂತ ಶೋಭನವೇ ಸರಿ.

ಈ ಜಯಪ್ರಾಪ್ತಿಯಲ್ಲಿ ಸಂಸ್ಕೃತಾಭಿಮಾನಿಗಳಾದ ಹಲವು ಮಹಾನುಭಾವರು ದೈಹಿಕವಾದ ಹಾಗೂ ಮಾನಸಿಕವಾದ ಆಯಾಸದಿಂದಲೂ, ಹೇರಳವಾಗಿ ಹಣ ಖರ್ಚುಮಾಡಿಯೂ ಶ್ರಮಪಟ್ಟುದುಂಟು. ಆ ಮಹಾಭಾಗರೆಲ್ಲರಿಗೂ ಸಹ ನಾನಿಲ್ಲಿ ಸಂಸ್ಕೃತಪ್ರೇಮಿಗಳ ಪ್ರತಿನಿಧಿಯೆನಿಸಿ ಕೃತಜ್ಞತೆಯೊಡಗೂಡಿದ ಆದರಪೂರ್ವಕವಾದ ನಮಸ್ಕಾರಗಳನ್ನು ಸಮರ್ಪಿಸುತ್ತೇನೆ.

ನಾವುಗಳಂತೂ ಕನ್ನಡರಾಜ್ಯದಲ್ಲಿ ಹುಟ್ಟಿದವರು, ಬೆಳೆದವರು. ಕನ್ನಡವು ನಮ್ಮ ಮಾತೃಭಾಷೆಯೇ ಸರಿ. ಆ ಉಲಿಯೊಡನೆಯೇ ನಾವು ನಮ್ಮ ತಾಯಿ ಮಡಿಲಲ್ಲಿ ಲಾಲನೆಪಾಲನೆಗಳನ್ನು ಪಡೆದು ಬೆಳೆದೆವು, ವಿದ್ಯೆಯನ್ನು ಕಲಿತೆವು. ನಮ್ಮ ತಾಯೆನಿಸಿದ ಕನ್ನಡನುಡಿಯೊಡನೆ ವಿರೋಧವೆಂಬುದನ್ನು ನಾವು ಮನಸ್ಸಿನಲ್ಲೂ ಚಿಂತಿಸೆವು. ಕನ್ನಡವು ಸರ್ವಪ್ರಕಾರದಿಂದಲೂ ಪುಷ್ಟವಾಗಬೇಕು, ನಮ್ಮೆಲ್ಲರನ್ನೂ ಪೊರೆಯಬೇಕು—ಎಂಬಿದೇ ನಮ್ಮ ನಿಶ್ಚಯವಾದ ತಿಳಿವಳಿಕೆ. ಸೋಮೇಶ್ವರನೆಂಬ ಕನ್ನಡದೇಶದ ಸಂಸ್ಕೃತಕವಿಯು ಬ್ರಹ್ಮನ ಸೃಷ್ಟಿಯಲ್ಲಿ ಕರ್ಣಾಟಕವೇ ಸಾರಭೂತವಾದುದೆಂದು ಅಭಿಮಾನದಿಂದ ತನ್ನ ವಿಕ್ರಮಾಂಕಾಭ್ಯುದಯದಲ್ಲಿ ಬಣ್ಣಿಸಿದ್ದಾನೆ:

ದೇಶಾನ್ ಅನ್ಯಾನ್ ಪೂರ್ವಮಭ್ಯಾಸಹೇತೋಃ
ಕೃತ್ವಾ ಮನ್ಯೇ ಲಬ್ಧಶಿಲ್ಪಪ್ರಕರ್ಷಃ ।
ಪಶ್ಚಾಚ್ಚಕ್ರೇ ಯಂ ವಿಧಿಃ ಸೃಷ್ಟಿಸಾರಂ
ಸ ವ್ಯಾವರ್ಣ್ಯಃ ಕೇನ ಕರ್ಣಾಟದೇಶಃ ? ॥

ಸಂಸ್ಕೃತಭಾಷೆಯ ಅಧ್ಯಯನದಿಂದಲೇ ಕನ್ನಡಭಾಷೆಯ ಪುಷ್ಟಿ-ತುಷ್ಟಿಗಳು ; ಇಲ್ಲವಾದಲ್ಲಿ ದೊಡ್ಡ ನಷ್ಟವೇ ಸರಿ— ಎಂದೇ ನಾವು ದೃಢವಾಗಿ ನಂಬಿದ್ದೇವೆ. ಎಂದೇ ನಾವು ಹೇಳುವೆವು :

ಮಾತೃವದ್ ಭಗಿನೀವಚ್ಚ ಯಾ ನಃ ಪುಷ್ಣಾತಿ ಮಾತರಮ್ ।
ಗೈರ್ವಾಣ್ಯಪಿ ಚ ಸಾ ಜೀಯಾದಿತ್ಯೇವಾಸ್ಮಾಕಮಾಶಯಃ ॥

(ತಾಯಿ-ಸೋದರಿಯರಂತೆ ಯಾವುದು ನಮ್ಮ ತಾಯಿಯನ್ನು ಪೋಷಣೆ ಮಾಡುತ್ತಿದೆಯೋ ಅಂತಹ ಸಂಸ್ಕೃತವು ಜಿಷ್ಣುವಾಗಿರಲಿ ಎಂಬುದೇ ನಮ್ಮ ಆಶಯ).

ಕರ್ಣಾಟಕದಲ್ಲಿ ಸಂಸ್ಕೃತ

ಕರ್ಣಾಟಕ ರಾಜ್ಯದಲ್ಲಿ ಪ್ರಾಚೀನಕಾಲದಿಂದಲೂ ಶ್ರೇಷ್ಠವಿದ್ವಾಂಸರೂ, ಕವಿಶ್ರೇಷ್ಠರೂ ದೇವವಾಣಿಯನ್ನು ಚೆನ್ನಾಗಿ ಸೇವೆಮಾಡಿ ಕೃತಾರ್ಥರಾದರು.

ಕ್ರಿ. ಶ. 5ನೆಯ ಶತಮಾನದಲ್ಲಿ ಕದಂಬರಾಜನಾದ ಶಾಂತಿವರ್ಮನ ಆಸ್ಥಾನದಲ್ಲಿ ಕುಬ್ಜನೆಂಬ ಕವಿವರನು ಮಂಡಿಸಿದ್ದನೆಂದು ತಾಲಗುಂದಶಿಲಾಶಾಸನದಿಂದ ತಿಳಿದು ಬರುತ್ತದೆ. ಕನ್ನಡನಾಡಿನ ಪಂಡಿತರಲ್ಲಿ-ಕವಿಗಳಲ್ಲಿ ಬಹುಮಂದಿ ಜೈನಮತಾನು ಸಾರಿಗಳೆಂಬುದು ವಿಶೇಷವಾಗಿ ಮನನೀಯವಾಗಿದೆ. ಅವರಲ್ಲಿ ಹೇಮಸೇನ ನೆಂಬಾತನು ರಾಘವಪಾಂಡವೀಯವೆಂಬ ದುರ್ಘಟವಾದ ಶ್ಲೇಷಕಾವ್ಯವನ್ನು ಬರೆದನು. ವಾದೀಭಸಿಂಹನೆಂಬಾತನು ಗದ್ಯಚೂಡಾಮಣಿ, ಕ್ಷತ್ರಚೂಡಾಮಣಿ ಗಳೆಂಬ ಎರಡು ಗದ್ಯಕಾವ್ಯಗಳನ್ನು ಬರೆದನು. ಅಂತೆಯೇ ಸೋಮದೇವಸೂರಿಯ ಯಶಸ್ತಿಲಕಚಂಪೂ, ಜಿನಸೇನಾಚಾರ್ಯನ ರಸಭರಿತವಾದ ಮಹಾಪುರಾಣ, ವಾದಿ ರಾಜನ ಯಶೋಧರಚರಿತ-ಪಾರ್ಶ್ವನಾಥಚರಿತಗಳು ಪ್ರಮುಖವಾಗಿ ಗಣ್ಯವೆನಿಸುವ ಜೈನ ಕಾವ್ಯಗಳು. ಅಂತೆಯೇ ಕುಂದಕುಂದಾಚಾರ್ಯ, ಉಮಾಸ್ವಾಮಿ, ಪೂಜ್ಯಪಾದ, ಅಮೃತಚಂದ್ರಸೂರಿ, ಭಟ್ಟಾಕಲಂಕ ಮೊದಲಾದ ವಿದ್ವದ್ವರಿಷ್ಠರು ಕರ್ಣಾಟಕದ ಜೈನರೇ ಆಗಿದ್ದು ಜೈನಸಿದ್ಧಾಂತದ ತರ್ಕಕರ್ಕಶವಾದ ಅನೇಕ ಪ್ರೌಢಗ್ರಂಥಗಳನ್ನು ವಿರಚಿಸಿದರು.

ಇದಲ್ಲದೆ, ಯಾಜ್ಞವಲ್ಕ್ಯಸ್ಮೃತಿಯ ಸುಪ್ರಸಿದ್ಧವ್ಯಾಖ್ಯಾನಕಾರ ವಿಜ್ಞಾನೇಶ್ವರನು ಕನ್ನಡದೇಶದವನು. ಸೋಮದೇವನ ಅಭಿಲಷಿತಾರ್ಥಚಿಂತಾಮಣಿ ಯೆಂಬ ವಿಶ್ವಕೋಶ, ಕೆಳದಿ ಬಸವರಾಜೇಂದ್ರನ ಶಿವತತ್ತ್ವರತ್ನಾಕರ, ವಿದ್ಯಾ ಚಕ್ರವರ್ತಿಯ ರುಕ್ಮಿಣೀಕಲ್ಯಾಣ, ತ್ರಿವಿಕ್ರಮಪಂಡಿತನ ಉಷಾಹರಣ, ಗಂಗಾ ದೇವಿಯ ವೀರಕಂಪಣರಾಯಚರಿತ, ತಿರುಮಲಾಂಬೆಯ ವರದಾಂಬಿಕಾಪರಿಣಯ, ಅನಂತಭಟ್ಟನ ಭಾರತಚಂಪೂ-ಮುಂತಾದ ಹತ್ತು ಹಲವು ಕೃತಿಗಳನ್ನು ಕನ್ನಡಿಗರು ಸಂಸ್ಕೃತವಾಗ್ದೇವಿಗೆ ಸಮರ್ಪಣೆಯಾಗಿತ್ತಿದ್ದಾರೆ.

ಶ್ರೀಮನ್ಮಧ್ವಾಚಾರ್ಯರೂ ಅವರ ಹಲಮಂದಿ ಅನುಯಾಯಿಗಳೂ ಕನ್ನಡಿಗರು. ದ್ವೈತವೇದಾಂತವನ್ನು ಸ್ಥಾಪಿಸುವ ಹಲವು ಪ್ರೌಢಗ್ರಂಥಗಳನ್ನು ರಚಿಸಿದವರು.

ವಿಜಯನಗರ ಸಾಮ್ರಾಜ್ಯದಲ್ಲಿಯಂತೂ ಶ್ರೀವಿದ್ಯಾರಣ್ಯ, ಸಾಯಣಾಚಾರ್ಯ, ಭೋಗನಾಥ ಮೊದಲಾದ ವೇದಭಾಷ್ಯನಿರ್ಮಾಪಕರಾದ ಪಂಡಿತದಿಗ್ದಂತಿಗಳ ಕೂಟವೇ ಇದ್ದಿತು. ವೀರಶೈವರಲ್ಲೂ ಪಾಲ್ಕುರಿಕೆ ಸೋಮನಾಥ, ಷಡಕ್ಷರದೇವ ಮುಂತಾದ ಪಂಡಿತರು-ಕವಿಗಳು ಕರ್ಣಾಟಕ ದೇಶವನ್ನು ಅಲಂಕರಿಸಿದರು.

ಆಧುನಿಕರಲ್ಲಿಯೂ ಶ್ರೀವಿರೂಪಾಕ್ಷಶಾಸ್ತ್ರಿಗಳು, ಲಕ್ಷ್ಮೀಪುರಂ ಶ್ರೀನಿವಾಸಾ ಚಾರ್ಯರು, ಪಂಡಿತ ರಾಮಚಂದ್ರಾಚಾರ್ಯರು, ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರೂ ಪಂಡಿತಪ್ರಕಾಂಡರೆನಿಸಿದ್ದುದನ್ನು ನಾವೇ ಕಣ್ಣಿಂದ ಕಂಡಿದ್ದೇವೆ. ಅಂತೆಯೇ ಮಹಾಕವಿಗಳಲ್ಲೂ ಜಗ್ಗುಶಿಂಗರೈಯ್ಯಂಗಾರ್ಯರು, ಆಳ್ವಾರಯ್ಯಂ ಗಾರ್ಯರು, ಪಂಢರೀನಾಥಾಚಾರ್ಯ ಮುಂತಾದವರೂ ಇರುವರೆಂದೇ, ವಿದ್ವತ್ ಪರಂಪರೆಯ ಅವಿಚ್ಛೇದವನ್ನು ಬಿನ್ನವಿಸಿಕೊಳ್ಳಲು ನನಗೆ ಅಭಿಮಾನವೇ ಆಗುತ್ತದೆ.

ಕರ್ನಾಟಕದಲ್ಲಿ ಸಂಸ್ಕೃತಾಧ್ಯಯನದ ಪರಿಸ್ಥಿತಿ

ಏಕೀಕರಣಕ್ಕೆ ಮೊದಲು ಮೈಸೂರು ರಾಜ್ಯದಲ್ಲಿ ಮಹಾರಾಜರ ಕೃಪೆಯಿಂದ ಪೋಷಣೆಪಡೆದು ಸಂಸ್ಕೃತವಾಣಿಯು ಚಿರಕಾಲ ಶೋಭಿಸುತ್ತಿತ್ತು. ಏಕೀಕರಣದ ಬಳಿಕವೂ ಉದಾರಹೃದಯವುಳ್ಳ ಸರಕಾರವು ಹೊಸ ಸಂಸ್ಕೃತ ಮಹಾಪಾಠಶಾಲೆಗಳನ್ನೂ ಹಲವು ಪಾಠಶಾಲೆಗಳನ್ನೂ ಅನುದಾನ (grant) ವಿತ್ತು ಸ್ಥಾಪಿಸಿತು. ಶಕ್ತಿ-ಅರ್ಹತೆಗಳಿಗನುಸಾರ ಕರ್ನಾಟಕಸರ್ಕಾರವು ಸಂಸ್ಕೃತಾಧ್ಯಯನವನ್ನು ಪ್ರೋತ್ಸಾಹಿಸುತ್ತಿದೆಯೆಂಬುದು ಸಂತೋಷದ ವಿಷಯ. ಹಲವು ಪ್ರೌಢಶಾಲೆ ಮತ್ತು ಕಾಲೇಜುಗಳಲ್ಲಿ ಸಂಸ್ಕೃತಾಧ್ಯಯನಕ್ಕೆ ಅವಕಾಶವಿದೆ. ಶೃಂಗೇರೀ ಜಗದ್ಗುರುಗಳು ಸ್ವತಂತ್ರವಾಗಿ ಸಂಸ್ಥಾಪನೆ ಮಾಡಿದ ಮಹಾಪಾಠಶಾಲೆ, ಪಾಠಶಾಲೆ ಹಾಗೂ ಸುರಸರಸ್ವತೀ ಸಭಾ—ಇವುಗಳು ಇಲ್ಲಿ ಸ್ಮರಣೀಯವೆನಿಸಿವೆ.

ಸರಕಾರವು ನಡೆಸುತ್ತಿರುವ ಎಂಟು ಸಂಸ್ಕೃತಕಾಲೇಜುಗಳಲ್ಲಿಯೂ, 300 ಕ್ಕಿಂತಲೂ ಹೆಚ್ಚಿನ ಪಾಠಶಾಲೆಗಳಲ್ಲಿಯೂ ಸಾಂಪ್ರದಾಯಿಕವಾದ ಅಧ್ಯಯನವು ಪ್ರಾಚೀನಕ್ರಮದಲ್ಲೇ ನಡೆಯುತ್ತಿದೆ. ಮಹಾಪಾಠಶಾಲೆಗಳಲ್ಲಿ ವ್ಯಾಕರಣ, ನವೀನ-ನ್ಯಾಯ, ಎಲ್ಲ ವೇದಾಂತಭೇದಗಳು, ಪೂರ್ವಮೀಮಾಂಸೆ, ಜ್ಯೌತಿಷ, ಧರ್ಮ-ಶಾಸ್ತ್ರ, ಅಲಂಕಾರ ಹಾಗೂ ಜೈನ ಸಿದ್ಧಾಂತ—ಎಂಬೀ ಶಾಸ್ತ್ರಗಳಲ್ಲೂ ವೇದ-ಆಗಮಗಳಲ್ಲಿಯೂ ಸಹ ಪ್ರೌಢವಾದ ವಿದ್ವತ್ತನ್ನು ಸಂಪಾದಿಸಲು ಅವಕಾಶ ಕಲ್ಪಿಸಿದೆ.

ಪ್ರೌಢ ಪಾಂಡಿತ್ಯ

ಇಲ್ಲಿ ನಡೆಯುವ ಪರೀಕ್ಷೆಗಳಲ್ಲಿ ಪರಮೋಚ್ಚವೆಂದರೆ ವಿದ್ವದುತ್ತಮ ಪರೀಕ್ಷೆಗಳು. ಆಳವಾದ ಪಾಂಡಿತ್ಯವನ್ನು ಈ ಪರೀಕ್ಷೆಗಳು ವಿದ್ಯಾರ್ಥಿಗಳಲ್ಲಪೇಕ್ಷಿಸುತ್ತವೆ. ಆದರೆ ಈಗ ಅಂತಹ ಪ್ರೌಢಪಾಂಡಿತ್ಯವು ವಿರಲಪ್ರಾಯವೇ ಆಗಿರುವುದೆಂಬುದು ಶೋಕಾಸ್ಪದವಾಗಿದೆ.

ಸ್ವಾಧ್ಯಾಯ-ಪ್ರವಚನಗಳಿಂದಲೇ ಶಾಸ್ತ್ರಸಂರಕ್ಷಣವು ನಡೆಯುವಂತಹುದು ಆದಾದರೂ ಪಲ್ಲವಗ್ರಾಹಿಪಾಂಡಿತ್ಯ (ತಲಸ್ಪರ್ಶಿಯಲ್ಲದ ಪಾಂಡಿತ್ಯ)ದಿಂದ ಸಿದ್ಧಿಸುವುದಲ್ಲ. ಆದರೆ ಶಾಸ್ತ್ರರಕ್ಷಣೆಗಾಗಿ ಹಾಗೂ ಪ್ರೌಢಪಾಂಡಿತ್ಯದ ಪ್ರೋತ್ಸಾಹಕ್ಕಾಗಿ ವಿದ್ವಾಂಸರ ವಾಕ್ಯಾರ್ಥಸಭೆಗಳನ್ನು ಕೆಲವರು ಮಠಾಧಿಪತಿಗಳು ಮಾಡಿಕೊಂಡು ಬರುತ್ತಿರುವುದು ಯುಕ್ತವೇ. ಶಾಸ್ತ್ರರಕ್ಷೆಗೆ ಇದೊಂದು ಪ್ರಕಾರ. ಎಲ್ಲ ಮಠಾಧಿಪತಿಗಳೂ ಸಹ ತಮ್ಮ ಒಂದೊಂದು ಮಠದಲ್ಲೂ ಒಂದಿಲ್ಲೊಂದು ಶಾಸ್ತ್ರದ ಸಮಗ್ರವಾದ ಪೋಷಣೆ-ರಕ್ಷಣೆಗಳನ್ನು ಮಾಡತಕ್ಕದ್ದೆಂದು ಪ್ರತಿಜ್ಞೆ ಮಾಡಬೇಕೆಂದೇ ನನಗೆ ಎನ್ನಿಸುತ್ತದೆ.

ಈ ತೆರನಾದ ಆಳವೂ ತಳಸ್ಪರ್ಶಿಯೂ ಆದ ಪಾಂಡಿತ್ಯವನ್ನು ರಕ್ಷಿಸದೆ ಹೋದಲ್ಲಿ ಮಹತ್ತ್ವದ ನಷ್ಟವೇ ಆದೀತು. ಪೂರ್ವಿಕರು ಕಷ್ಟಪಟ್ಟು ಸಂಪಾದಿಸಿದ ನಿಧಿ ಕೈತಪ್ಪಿ ಹೋದೀತು. ಶಾಸ್ತ್ರಗಳ ವಿಷಯದಲ್ಲಿ ಅವರು ಮಾಡಿದ ಮಹತ್ತ್ವದ ಶ್ರಮವೆಲ್ಲ ವ್ಯರ್ಥವಾದೀತು.

ವಿದ್ವತ್‌ಪರೀಕ್ಷೆ ಪಾಸುಮಾಡಿದ ಜನ ಯಾವುದೋ ಸಂಬಳಕೊಡುವ ಉದ್ಯೋಗದಿಂದ ತೃಪ್ತರಾದಲ್ಲಿ, ಅವರ ಅಧ್ಯಯನವೆಂಬುದು ಸುಳ್ಳುಮಾತಾದೀತು. ಜೀವಿಕೆಯ ನಿರ್ವಹಣೆಗೆ ವ್ಯವಸ್ಥೆಯೊಂದಿದ್ದಮೇಲೆ ಅಧ್ಯಯನದ ವಿಷಯದಲ್ಲಿ ಔದಾಸೀನ್ಯವೆಂದರೆ ಶೋಚನೀಯವೇ ಸರಿ. ಯಾವ ವಿದ್ಯೆಯಿಂದ ನಾವು ಜೀವಿಕೆಯನ್ನು ಗಳಿಸುತ್ತಿದ್ದೇವೋ ಆ ವಿದ್ಯೆಯಲ್ಲಿ ಪರಿನಿಷ್ಠಿತವಾದ ಜ್ಞಾನಾರ್ಜನೆ, ಗ್ರಂಥನಿರ್ಮಾಣ, ಪ್ರವಚನ-ಪ್ರಚಾರ ಮುಂತಾದ ಕಾರ್ಯಸಮೂಹವು ನಮ್ಮ ಆದ್ಯ ಕೃತ್ಯವೇ ಸರಿ. ಸರ್ವಥಾ ನಾವು ಸಂಸ್ಕೃತವಾಗ್ದೇವಿಗೆ ಋಣಿಗಳೇ ಆಗಿದ್ದೇವೆ.

ಆಧುನಿಕ ಸಂಸ್ಕೃತವಾಙ್ಮಯ

'ಈ ಸಂಸ್ಕೃತದವರೋ ಹಳೇ ಕಾಲದ ಸಂಸ್ಕೃತಸಾಹಿತ್ಯದ ವೈಭವವನ್ನೇ ತೋರ್ಪಡಿಸಿಕೊಳ್ಳುತ್ತಾ ತೃಪ್ತರಾಗಿಬಿಟ್ಟಿರುವವರು, ಹೊಸ ವಾಙ್ಮಯವನ್ನು ಮಾತ್ರ ಸೃಷ್ಟಿಸುವವರಲ್ಲ'—ಎಂಬುದು ಮಾತ್ರ ಮಿಥ್ಯಾಲಾಪವೇ ಸರಿ. ಇದೇ 20ನೇ ಶತಮಾನದಲ್ಲೇ ಮಹಾಕಾವ್ಯಗಳು, ಖಂಡ ಕಾವ್ಯಗಳು, ನಾಟಕಗಳು ಹಾಗೂ ಚಂಪೂ ಕಾವ್ಯಗಳು—ಇವನ್ನು ಸಂಸ್ಕೃತ ಕವಿವರ್ಯರು ಬರೆದು ಪ್ರಕಾಶನಪಡಿಸಿದ್ದಾರೆ. ವ್ಯಾಕರಣ-ವೇದಾಂತ ಮುಂತಾದ ಶಾಸ್ತ್ರಗಳಲ್ಲೂ ವೈದುಷ್ಯಪೂರ್ಣವಾದ ಮತ್ತು ಹಿಂದಿನ ಕಾಲದ ಪಂಡಿತರ ಕೃತಿಗಳಿಗೆ ಸಮನೆನಿಸುವ ವ್ಯಾಖ್ಯಾನಗಳನ್ನೂ ಶ್ರೇಷ್ಠ ವಿದ್ವಾಂಸರು ಬರೆದಿದ್ದಾರೆ.

ಹೊಸದಾಗಿ ಬರೆಯಲಾದ ಗ್ರಂಥಗಳ ಪರಿಚಯಕ್ಕಾಗಿ, ಕುತೂಹಲವಿದ್ದಲ್ಲಿ ಈ ನಿಬಂಧಗಳನ್ನು ನೋಡಬಹುದು :

1. ಅರ್ವಾಚೀನಸಂಸ್ಕೃತಸಾಹಿತ್ಯಮ್ (ಪ್ರಾ. ಶ್ರೀ ವರ್ಣೇಕರ ವಿರಚಿತ)
2. ವಿದ್ವದ್ವೃತ್ತಮ್ (ಪ್ರಾ. ಶ್ರೀ ಕಾಲೀಪ್ರಸಾದ ಶಾಸ್ತ್ರಿಗಳು ಬರೆದುದು)
3. 'ನಿಕಷೋಪಲ'ವೆಂಬ ಹೆಸರಿನ, ವಿಶೇಷ ಸಂಚಿಕೆ (ನವದಿಲ್ಲೀ ಪ್ರಕಾಶನದ 'ಸಂಸ್ಕೃತ ಪ್ರತಿಭಾ')
4. Modern Sanskrit Writings (Dr. V. Raghavan)

ಇವಲ್ಲಿ ಈಗಿನ ಕಾಲದ ಮಹಾಪುರುಷರೆನಿಸಿದ, ಇತಿಹಾಸದಲ್ಲಿ ಹೆಸರುವಾಸಿಯಾದ ಶಿವಾಜಿ ಮುಂತಾದವರನ್ನು ಕುರಿತು ಮಹಾಕಾವ್ಯಗಳನ್ನು ಬರೆದಿರುವುದೊಂದು ವಿಶೇಷ. ಈ ಗ್ರಂಥಗಳು ವಿಶೇಷವಾಗಿ ಸ್ಮರಣೀಯವೆನಿಸಿವೆ :

1. ಮಾಲವೀಯಮಹಾಕಾವ್ಯಮ್ (ಮದನಮೋಹನ ಮಾಳವೀಯರನ್ನು ಕುರಿತದ್ದು)
2. ಗಾಂಧಿಚರಿತಮ್ (ಮಹಾತ್ಮಾ ಗಾಂಧಿಯವರನ್ನು ಕುರಿತಾಗಿ)

3. ವಿವೇಕಾನಂದವಿಜಯಮ್ (ಡಾ॥ ವರ್ಣೇಕರರು ಬರೆದುದು)
4. ಶ್ರೀ ಶಿವರಾಜ್ಯೋದಯಮ್ (ಡಾ॥ ವರ್ಣೇಕರರದೇ)
5. ಶ್ರೀ ತಿಲಕಯಶೋऽರ್ಣವಃ (ಅಣೇಯವರು ಬರೆದುದು)
6. ವಿಶಾಲಭಾರತಮ್ (ಜವಾಹರಲಾಲ ನೆಹರೂರವರನ್ನು ಕುರಿತದ್ದು)
7. ಬಂಗ್ಲಾದೇಶಃ (ರಮೇಶಚಂದ್ರ ಶುಕ್ಲರವರು ಬರೆದುದು)
8. ಭಾರತಾಯನಮ್ (ದಿನೇಶಪ್ರಸಾದ ಪಾಂಡೇಯರವರು ಬರೆದುದು)

ಕನ್ನಡರಾಜ್ಯದಲ್ಲೂ ಸಹ ಶ್ರೀ ಪಂಢರೀನಾಥಾಚಾರ್ಯ ಮೊದಲಾದವರು ಬರೆದ ಹಲವು ಕಾವ್ಯ-ನಾಟಕಗಳಿವೆ. ಡಾ॥ ಕೆ. ಕೃಷ್ಣಮೂರ್ತಿಯವರು ಹಲವು ಕಾವ್ಯಾಲಂಕಾರಗ್ರಂಥಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡಿದರು. ಕುಂತಕನ ವಕ್ರೋಕ್ತಿಜೀವಿತವನ್ನು ಮಹತ್ತಾದ ಪರಿಶ್ರಮದಿಂದ ಸಂಪಾದಿಸಿ ಆಂಗ್ಲಭಾಷೆಗೂ ತರ್ಜುಮೆ ಮಾಡಿದರೆಂಬುದು ವಿಶೇಷವಾಗಿ ಸ್ಮರಣೀಯವಾಗಿದೆ.

ಅಂತೆಯೇ ಪತ್ರಿಕಾರಂಗದಲ್ಲಿಯೂ ಪ್ರಶಂಸಾರ್ಹವಾದ ಕೆಲಸವನ್ನು ಸಂಸ್ಕೃತಜ್ಞರು ಮಾಡಿದ್ದಾರೆ. ದೈನಿಕ, ಸಾಪ್ತಾಹಿಕ, ಪಾಕ್ಷಿಕ, ತ್ರೈಮಾಸಿಕ, ಷಾಣ್ಮಾಸಿಕ ಹಾಗೂ ಅನಿಯತಕಾಲಿಕಗಳೆಂದು ನೂರಾರು ಪತ್ರಿಕೆಗಳು ಪ್ರಕಾಶ ಗೊಳ್ಳುತ್ತಿವೆ. ಕನ್ನಡ ರಾಜ್ಯದಲ್ಲಿ ಶ್ರೀ ವರದರಾಜ ಐಯ್ಯಂಗಾರ್ಯರು ಮೈಸೂರು ನಗರದಿಂದ ಪ್ರಕಾಶನ ಮಾಡುತ್ತಿರುವ 'ಸುಧರ್ಮಾ' ದಿನಪತ್ರಿಕೆಯನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸಬೇಕು.

ಭಾಷೆಯ ಸುಲಭೀಕರಣ

ಪ್ರತಿನಿತ್ಯವೂ ಆಕಾಶವಾಣಿಯು ಎರಡು ಬಾರಿ ಸಂಸ್ಕೃತದಲ್ಲಿ ವಾರ್ತೆಗಳನ್ನು ಪ್ರಸಾರ ಮಾಡುತ್ತದೆ. ಈ ಕಾರ್ಯಕ್ರಮವು ಸಂಸ್ಕೃತಾಭಿಮಾನಿಗಳಿಗೆ ಅತ್ಯಂತ ಪ್ರಿಯವೆನಿಸಿದೆ. ಲೌಕಿಕ-ರಾಜಕೀಯ ವಿಷಯಗಳನ್ನು ಬೋಧಿಸಲೂ ಈ ಭಾಷೆಯು ಸಮರ್ಥವೆಂಬುದು ಇದರಿಂದ ಪ್ರಮಾಣಿತವಾಗಿದೆ. ಹೀಗಿದ್ದರೂ 'ಸಂಸ್ಕೃತ ಭಾಷೆ ಕಷ್ಟ, ಅದರ ವ್ಯಾಕರಣ ಕಷ್ಟ'ವೆಂಬ ಮಾತು ಮಾತ್ರ ಕೇಳಿಬರುತ್ತಲೇ ಇದೆ. ಈ ವಿಷಯದಲ್ಲಿ ಇಷ್ಟು ತೋರುತ್ತದೆ : ಪ್ರಪಂಚದಲ್ಲಿರುವ ಎಲ್ಲಾ ಭಾಷೆಗಳೂ ಆರಂಭದಲ್ಲಿ ಕಷ್ಟವೆಂದೇ ತೋರುತ್ತವೆ. ಪರಿಶುದ್ಧವಾದ ವಾಕ್ಯವನ್ನು ಪ್ರಯೋಗಿಸ ಬೇಕಾದರೆ ವ್ಯಾಕರಣದ ಅಧ್ಯಯನವು ಬೇಕೆಂಬುದೂ ಎಲ್ಲೆಡೆಯೂ ಅನ್ವಯಿಸು ವಂತಹುದೇ. ಎಲ್ಲ ಭಾಷೆಗಳಲ್ಲೂ ವ್ಯಾಕರಣವು ಕಷ್ಟವೇ ಸರಿ. ಕಷ್ಟಪಡದೆ ಏಳ್ಗೆ ತಾನೆ ಲೋಕದಲ್ಲಿ ಎಲ್ಲಿಯಾದರೂ ಉಂಟೆ ? ಏನೆಂದರೆ ಸಂಸ್ಕೃತಬೋಧನಕ್ರಮ ಹಾಗೂ ಪಠ್ಯಪುಸ್ತಕನಿರ್ಮಾಣದಲ್ಲಿ ಹಲವು ದೋಷಗಳು ಮನೆಮಾಡಿಕೊಂಡಿವೆ. ಅವುಗಳನ್ನು ಸಮಗ್ರವಾಗಿ ಇಲ್ಲಿ ಪರಿಶೀಲಿಸಲು ನಾನು ಬಯಸುವುದಿಲ್ಲ. ಇಷ್ಟಂತೂ

ಹೇಳಬೇಕು : ಪ್ರಾಥಮಿಕಶಿಕ್ಷಣದಿಂದ ಹಿಡಿದು ಪ್ರೌಢಶಿಕ್ಷಣದವರೆವಿಗೂ ಕನ್ನಡ ಭಾಷೆಯ ಮೂಲಕವೋ ಇಂಗ್ಲಿಷ್ ಭಾಷೆಯ ಮೂಲಕವೋ ಸಂಸ್ಕೃತವನ್ನು ಅಧ್ಯಾಪಕರು ಬೋಧಿಸುತ್ತಿದ್ದಾರೆ. ಇದುವೆ ಒಂದು ದೊಡ್ಡ ಕಾರಣವಾಗಿಬಿಟ್ಟಿದೆ— ಸಂಸ್ಕೃತವನ್ನು ಕಷ್ಟವೆಂದು ಕರೆಯಲು. ಈ ವಿಷಯದಲ್ಲಿ ಆಳವಾಗಿ ಯೋಚನೆ ಮಾಡತಕ್ಕದ್ದಿದೆ. ಆಂಗ್ಲ ಭಾಷೆಯನ್ನು ಕಲಿಸತಕ್ಕವರಾರಾದರೂ ಬೇರೊಂದು ಭಾಷೆಯನ್ನು ಮಾಧ್ಯಮವಾಗಿ ಆಶ್ರಯಿಸುವರೇನು ? ಪ್ರಾಥಮಿಕ ಶಿಕ್ಷಣದಲ್ಲಿ ಒಂದು ವೇಳೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕನ್ನಡ ಭಾಷೆಯನ್ನು ಆಶ್ರಯಿಸು ವುದು ಕ್ವಚಿತ್ತಾಗಿ ಆವಶ್ಯಕವಾದಲ್ಲಿ, ಅಲ್ಲಿ ಅದು ಹಾಗೆಯೇ ಆಗಲಿ, ಪರವಾಯಿಲ್ಲ ಆದರೆ ಬಹುತೇಕವ್ಯವಹಾರವು ಮಾತ್ರ ಸಂಸ್ಕೃತದಲ್ಲೇ ಜರುಗಬೇಕು. ಹಾಗಾದಲ್ಲಿ ಅನೇಕ ಸಂಸ್ಕೃತ ಶಬ್ದಗಳನ್ನು ವ್ಯವಹಾರದಿಂದಲೇ ಸುಲಭವಾಗಿ ವಿದ್ಯಾರ್ಥಿಗಳು ಗ್ರಹಿಸಿಬಿಡುವರು. 'ಶಕ್ತಿಗ್ರಹ' ಅರ್ಥಾತ್ 'ಶಬ್ದಾರ್ಥಪರಿಜ್ಞಾನ'ವುಂಟುಮಾಡುವ ಕ್ರಮಗಳಲ್ಲಿ ವ್ಯವಹಾರವೇ ಶಿರೋಮಣಿಯೆನ್ನಲಡ್ಡಿಯಿಲ್ಲ. ವ್ಯವಹಾರಸಂಬಂಧವೇ ಇಲ್ಲದೆ ಭಾಷಾಧ್ಯಯನವೆಂದರೆ ಅದರಲ್ಲಿ ಸುಲಭತೆಯು ಬರುವುದಾದರೂ ಹೇಗೆ ? ಮಹಾಪಾಠಶಾಲೆಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಯಾವುದೋ ಬೇರೊಂದು ಭಾಷೆ ಯನ್ನೇ ಮಾಧ್ಯಮವಾಗಿ ಹೊಂದಿರುವರು, ಸಂಸ್ಕೃತವನ್ನಲ್ಲ—ಎಂದರೆ, ಇದಾವ ರೀತಿ ? ಪ್ರಾಯಶಃ ಅಧ್ಯಾಪಕರ ಅಸಾಮರ್ಥ್ಯವೇ ಅದಕ್ಕೆ ಕಾರಣವಿರಬೇಕು. ಈ ಅಸಾಮರ್ಥ್ಯವನ್ನು ಅವರಲ್ಲಿ ಸಂಕ್ರಮಣ ಮಾಡಿಸಿದವರು ಅವರ ಗುರುಗಳು. ಇದು ಹೀಗೆ ಪರಂಪರಿತವಾದ ಸರಪಳಿಯಾಗಿಬಿಟ್ಟಿದೆ. ಈ ಸರಪಣಿಯಿಂದ ನಮ್ಮನ್ನು ನಾವು ಬಿಡಿಸಿಕೊಳ್ಳದೇ ಹೋದಲ್ಲಿ ಸಂಸ್ಕೃತದ ಸರಳೀಕರಣ, ಪ್ರಚಾರ ಗಳನ್ನು ಕುರಿತಾದ ಪ್ರತ್ಯಾಶೆ (hope)ಯನ್ನು ಬಿಟ್ಟುಬಿಡಬೇಕಾಗುತ್ತದೆ.

ಸಂಸ್ಕೃತಭಾಷೆಯಲ್ಲಿ ಸಾಧಾರಣಶಬ್ದಗಳೂ ವಿಶೇಷಶಬ್ದಗಳೂ ಇವೆ. ಈ ವಿಶೇಷ ಶಬ್ದಗಳಲ್ಲಿ ನಾಮಪದ-ಕ್ರಿಯಾಪದಗಳ ಬಳಕೆಯು ಪ್ರೌಢ ಶಿಕ್ಷಣವಿಲ್ಲದೆ ದುಷ್ಕರವಾಗುತ್ತದೆ. ಸಾಧಾರಣ ಶಬ್ದಗಳ ಬಳಕೆ ಸುಲಭವೇ ಸರಿ. ಅದಕ್ಕೆ ವ್ಯಾಕರಣಜ್ಞಾನವು ಬೇಕಿಲ್ಲ. ಆ ಸಾಧಾರಣ ಶಬ್ದಗಳಿಂದಲೇ ಎಲ್ಲಾ ವ್ಯವಹಾರವೂ ಸಾಧ್ಯವೇ ಆಗುತ್ತದೆ. ಕನ್ನಡ ಭಾಷೆಯಲ್ಲಿ ಪ್ರಯೋಗದಲ್ಲಿ ಯಥೇಚ್ಛವಾಗಿ ಸಂಸ್ಕೃತ ಶಬ್ದಗಳಿವೆ. ಅವುಗಳ ಪರಿಚಯವಂತೂ ಎಲ್ಲರಿಗೂ ಇದ್ದೇ ಇದೆಯಷ್ಟೆ. ಅವ್ಯಯ-ಕ್ರಿಯಾಪದಗಳು ಮಾತ್ರ ಪ್ರಾಯಃ ಅವರಿಗಷ್ಟು ಪರಿಚಿತವಲ್ಲ. ಅವಲ್ಲೂ ನಿತ್ಯಗಟ್ಟಲೆಯ ವ್ಯವಹಾರಕ್ಕೆ ಉಪಯೋಗಪಡುವುವೂ ಕೆಲವೇ. ಅವುಗಳನ್ನು ಪರಿಚಯ ಮಾಡಿಕೊಳ್ಳುವುದೂ ಕಷ್ಟಕರವೇನಲ್ಲ. ಕ್ರಿಯಾಪದಗಳ ಸ್ಥಾನದಲ್ಲಿ ಕೃದಂತಗಳ ಪ್ರಯೋಗ ಸುಲಭ. ಇದೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು ಸಂಸ್ಕೃತಜ್ಞರು ಪ್ರಯತ್ನ ಮಾಡಿದಲ್ಲಿ 'ಈ ಭಾಷೆಯು ಕಷ್ಟ'ವೆಂಬ ಭಾವನೆಯು ವಿದ್ಯಾರ್ಥಿಗಳ ಮನಸ್ಸಿನಿಂದ ದೂರವಾಗುತ್ತದೆ.

ಸರಳೀಕರಣಕ್ಕಾಗಿ ದುಡಿಯುವವರು ವ್ಯಾಕರಣ ಶಾಸ್ತ್ರವನ್ನು ಮಾತ್ರ ಎಂದೂ ಕೈಬಿಡಲಾಗದು. ಶಬ್ದಗಳ ಲಿಂಗನಿಯಮವಾಗಲಿ, ಧಾತುಗಳ ಆತ್ಮನೇಪದ-ಪರಸ್ಮೈಪದ ವ್ಯವಸ್ಥೆಯಾಗಲಿ, ಗಣವ್ಯವಸ್ಥೆಯಾಗಲಿ – ಯಾವುದನ್ನಾದರೂ ಉದಾಸೀನ ಮಾಡಿದರೆ, ಈ ಭಾಷೆಯು ಮಾತ್ರ ಸಂಸ್ಕೃತವೆಂದೇ ಎನಿಸದು— ಮತ್ತೊಂದು ಅಪಭ್ರಂಶ ಭಾಷೆಯೇ ಆದೀತೆಂಬುದನ್ನು ಮನಗಾಣಬೇಕು.

ಸಂಸ್ಕೃತ ಪ್ರಚಾರ

ಸಂಸ್ಕೃತವನ್ನು ಕಲಿಯಲು ಭಾರತೀಯರ ಉತ್ಸುಕತೆಯಿಂದು ಬೇರೆ ಬೇರೆ ಕಾರಣಗಳಿಂದಾಗಿ ಕುಂಠಿತವಾಗಿದೆ. ಮತ್ತು ಎಂತಲೇ ನಿಷ್ಕ್ರಿಯವಾಗಿಬಿಟ್ಟಿದೆ. ಇದನ್ನು ಮತ್ತೆ ಜಾಗೃತಗೊಳಿಸಲು ನಮ್ಮಿಂದ ಪ್ರಯತ್ನವು ಈ ಕಾರಣದಿಂದ ನಡೆಯಲೇಬೇಕಾಗಿದೆ. ಪಾಠಶಾಲಾಸ್ಥಾಪನೆಯೊಂದೇ ಇದಕ್ಕಿರುವ ಉಪಾಯ ವೆಂದಲ್ಲ. ಈಗಿರುವ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳೇ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಸಂಸ್ಕೃತವನ್ನು ಕಲಿಯುವ ಕೌತುಕವೇ ಜನರಲ್ಲಿಲ್ಲದೇ ಹೋದಲ್ಲಿ ಪಾಠಶಾಲೆಗಳಿಂದಾ ಗುವುದಾದರೂ ಏನು ? ಆದ್ದರಿಂದ ಕಲಿಯಲು ಆಸೆಯನ್ನು ಜನರಲ್ಲಿ ನಾವು ಹುಟ್ಟಿಸಬೇಕಾಗಿದೆ. ಇದನ್ನು ಕಂಡುಕೊಂಡೇ ಬೆಂಗಳೂರು ನಗರದಲ್ಲಿರುವ ಹಿಂದೂಸೇವಾಪ್ರತಿಷ್ಠಾನವು ನಡೆಸುತ್ತಿರುವ ಸಂಸ್ಕೃತಸಂಭಾಷಣಶಿಬಿರಗಳು ಪ್ರಶಂಸನೀಯವೂ ಪ್ರಮುಖವೂ ಆಗಿವೆಯೆಂದು ನಾನು ಭಾವಿಸುತ್ತೇನೆ. ಈ ಶಿಬಿರಗಳು ಜನಪ್ರಿಯವಾಗುತ್ತಾ ದಿನದಿನಕ್ಕೆ ಪ್ರತ್ಯಾಶೆಯನ್ನು ಉಂಟುಮಾಡು ವಂತಹುಗಳಾಗಿವೆ. ಬೇರೆ ಬೇರೆ ವೃತ್ತಿಗಳಲ್ಲಿನ ಜನರನ್ನು ಈ ಶಿಬಿರಗಳು ಯಶಸ್ವಿ ಯಾಗಿ ಆಕರ್ಷಿಸುತ್ತಿವೆ. ಸಂಸ್ಕೃತವು ಸುಲಭವೆಂದು ಅವರಿಗೆ ಮತಿಯುಂಟಾಗಿದೆ. ಇಂತಹ ಸಂಭಾಷಣ ಶಿಬಿರಗಳು ಅಖಂಡ ಕರ್ಣಾಟಕದಲ್ಲಿಯೇ ಹಳ್ಳಿಗಳಲ್ಲಿ ನಗರಗಳಲ್ಲಿ ಯತ್ನಪೂರ್ವಕವಾಗಿ ಆಯೋಜಿಸಲ್ಪಡಬೇಕು. ಮತ್ತು ಮಹಾಜನರು ಅವನ್ನು ಪ್ರೋತ್ಸಾಹಿಸಬೇಕು.

ಹೀಗೆಯೇ ಜನಪ್ರಿಯ ನಾಟಕವನ್ನು ಸಹ ಅಲ್ಲಲ್ಲಿ ತೋರಿಸಬೇಕು. ಬೆಂಗಳೂರಿನ ಜಯನಗರ ಬಡಾವಣೆಯಲ್ಲಿನ NMKRV First Grade College For Women ಎಂಬೀ ಕಾಲೇಜಿನಲ್ಲಿ ನಡೆಯುತ್ತಿರುವ ಪ್ರತಿವರ್ಷದ ನಾಟಕೋ-ತ್ಸವವು ಈ ವಿಷಯದಲ್ಲಿ ಎಲ್ಲರಿಗೂ ಆದರ್ಶಭೂತವಾಗಿದೆ. ಪ್ರಾಚೀನ ಕಾಲದ ನಾಟಕಗಳನ್ನು ಅಭಿನಯಿಸಲು ಹೆಚ್ಚುಕಾಲ ಬೇಕಾಗುವುದೆಂಬ ಕಾರಣ ಹಾಗೂ ವಿಶೇಷವೇಷಭೂಷಣಾದಿಗಳನ್ನು ಅವು ಅಪೇಕ್ಷಿಸುವ ಕಾರಣ, ಅದಕ್ಕಿಂತಲೂ ಸಾಮಾಜಿಕ-ಐತಿಹಾಸಿಕ ನಾಟಕಗಳನ್ನು ಅಭಿನಯಿಸುವುದು ಯೋಗ್ಯವೆನಿಸುತ್ತದೆ. ಅಂತಹ ಲಘುನಾಟಕಗಳನ್ನು ಆಧುನಿಕ ಸಂಸ್ಕೃತ ಕವಿಗಳು ಬರೆದಿದ್ದಾರೆಂಬುದು

ಸಂತೋಷದ ವಿಷಯ. ಕವಿಗಳು ಈ ವಿಷಯದಲ್ಲಿನ್ನೂ ಪ್ರಯತ್ನವನ್ನು ಮಾಡು ವುದೊಳಿತು ಮತ್ತು ಈ ಸಂದರ್ಭದಲ್ಲಿ ಬಹು ಸಂಭ್ರಮದಿಂದ ಸ್ಮರಿಸಬೇಕಾದ ವಿಷಯವೆಂದರೆ ಶ್ರೀಮಾನ್ ಜಿ. ವಿ. ಐಯ್ಯರ್‌ರವರು 'ಆದಿಶಂಕರಾಚಾರ್ಯ'ವೆಂಬ ಚಲನಚಿತ್ರವನ್ನು ಸಂಸ್ಕೃತ ಭಾಷೆಯಲ್ಲಿ ಇದಂಪ್ರಥಮವಾಗಿ ನಿರ್ಮಿಸಿದರೆಂಬುದು, ಹಾಗೂ ಅದಕ್ಕೆ ಸ್ವರ್ಣಕಮಲ ಪ್ರಶಸ್ತಿಯು ಸಹ ದೊರಕಿರುವಂತಹುದು. ಇದರ ಪರಿಣಾಮವಾಗಿ ದಿಕ್ಕುದಿಕ್ಕುಗಳಲ್ಲಿ ಸಂಸ್ಕೃತದ ಸುಲಭತೆಯ ಸಮುದ್ಘೋಷವೇ ನಡೆದಿದೆ.

ಸಂಸ್ಕೃತಪ್ರಚಾರದ ವಿಷಯದಲ್ಲಿ ಶ್ರೀವಾಸುದೇವ ದ್ವಿವೇದೀಮಹೋದಯರು ಸುರಭಾರತೀಸಂದೇಶವೆಂಬ ಗ್ರಂಥದಲ್ಲಿ ಬರೆದಿರುವ ಈ ಸೂಕ್ತಿಗಳು ಮನನೀಯ. ಸಂಸ್ಕೃತಭಾರತಿಯು ಭಾರತೀಯರನ್ನು ಕುರಿತು ಹೀಗೆ ಸಂಬೋಧಿಸುತ್ತಾಳೆ :

ಬಹೂವ್ರತಾನಿ ಕುರ್ವಂತಿ ಭವಂತಃ ಪ್ರತಿವತ್ಸರಮ್ ।
ಇದಾನೀಮಿದಮಪ್ಯೇಕಂ ವ್ರತಂ ಸ್ವೀಕ್ರಿಯತಾಂ ನವಮ್ ॥
ವ್ಯಾಖ್ಯಾನೇನಾಥ ಲೇಖೇನ ಸಭಾಸಂಮೇಲನಾದಿಭಿಃ ।
ಆಯೋಜನೇನ ಗೋಷ್ಠೀನಾಂ ಸಂಗೀತಾಭಿನಯೈಸ್ತಥಾ ॥
ಪ್ರದರ್ಶಿನೀಭಿರ್ಗ್ರಂಥಾನಾಂ ಕವಿಸಂಮೇಲನೇನ ಚ ।
ಪುರಾಣವಚನೈಶ್ಚಾಪಿ ತಥಾ ಪ್ರಹಸನಾದಿಭಿಃ ॥
ವಿದ್ಯಾಲಯಾನಾಂ ಸರ್ವೇಷಾಂ ಛಾತ್ರೈರಧ್ಯಾಪಕೈಸ್ತಥಾ ।
ಆರಂಭೋ ಮತ್‌ಪ್ರಚಾರಾಯ ಸ್ವೀಯೇ ಕ್ಷೇತ್ರೇ
ವಿಧೀಯತಾಮ್ ॥ (ಪು. 19)

ಹೊಸಶಬ್ದಗಳ ನಿರ್ಮಾಣ

ವ್ಯವಹಾರಮಾರ್ಗದಲ್ಲಿ ಸಂಸ್ಕೃತವನ್ನು ನಾವು ತರಲೆತ್ನಿಸುವುದಾದಲ್ಲಿ ಕಷ್ಟವನ್ನನುಭವಿಸಬೇಕಾಗುವುದು ಕಟ್ಟಿಟ್ಟದ್ದೇ. ಈಗ ಹೊಸದಾಗಿ ಕಾಣಿಸಿ ಕೊಂಡಿರುವ ಗೃಹೋಪಕರಣಗಳು, ಯಾಂತ್ರಿಕವಸ್ತುಗಳು, ವಾಣಿಜ್ಯಾದಿಗಳಲ್ಲಿ ಉಪಯೋಗಿಸಲ್ಪಡುತ್ತಿರುವ ಬಹುತೇಕ ಪದಾರ್ಥಗಳು—ಇವುಗಳ ಹೆಸರುಗಳೇ ದೊರೆಯದಾಗಿವೆ. ಈ ಕಷ್ಟವನ್ನು ಪರಿಹರಿಸಲು ಮೂರು ಬಗೆಯಾಗಿ ಪರಿಹಾರ ವನ್ನು ಮಾಡಲು ಶಕ್ಯವೆಂದು ನನಗೆ ತೋರುತ್ತದೆ:

(1) ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿಸಾರ, ನಾಟ್ಯಶಾಸ್ತ್ರ, ವಾಸ್ತುಶಿಲ್ಪ ಗ್ರಂಥ, ಆಯುರ್ವೇದ, ಪಾಕಶಾಸ್ತ್ರ, ಧರ್ಮಶಾಸ್ತ್ರ, ಕಾಮಸೂತ್ರಾದಿಗ್ರಂಥಗಳಲ್ಲಿ ಪ್ರಯೋಗದಲ್ಲಿ ಕಾಣಸಿಗುವ ಹತ್ತು ಹಲವು ಇಂತಹ ಪದಗಳು ವ್ಯವಹಾರದಿಂದ ಜಾರಿಹೋಗಿವೆ. ಅವುಗಳನ್ನು ಯತ್ನಪೂರ್ವಕವಾಗಿ ಸಂಗ್ರಹಿಸಬೇಕು.

(2) ವಿಶೇಷಾರ್ಥಗಳಲ್ಲಿ ಹೊಸ ಶಬ್ದಗಳನ್ನು ನಿರ್ಮಿಸುವುದೂ ಶಕ್ಯವಿದೆ. ವಿದ್ವಾಂಸರು ಹೀಗೆ ಮಾಡಿರುವುದೂ ಉಂಟು. ಉದಾ:-ರಾಷ್ಟ್ರಪತಿ, ರಾಜ್ಯಪಾಲ, ಲೋಕಸಭಾ, ರಾಜ್ಯಸಭಾ, ಸಂಸತ್, ವಿಧಾನಸಭಾ, ಸಂವಿಧಾನ—ಇತ್ಯಾದಿಗಳು. ಅಂತೆಯೇ ವಿದ್ಯುಚ್ಛಕ್ತಿ, ಆಕಾಶವಾಣಿ, ದೂರದರ್ಶನ ಇತ್ಯಾದಿ.

(3) ಸಂಜ್ಞಾಪದ (Proper Nouns) ಗಳನ್ನು ಪರಿವರ್ತನಮಾಡುವುದು ಚೆನ್ನಾಗಲಾರದು. ಆದ್ದರಿಂದ 'ನೆಹರೂ ಮಹಾಶಯಃ' 'ಮದ್ರಾಸ್ ನಗರಂ' ಎಂದೇ ಹೇಳಬೇಕಾಗುತ್ತದೆಯೆಂಬುದು ಸ್ಪಷ್ಟ. ಹೀಗೆಯೇ ಸಂಸ್ಕೃತ ಪದಗಳಿಗೆ ಸರಿಸಮನಂತೆ ಬೇರೆ ಭಾಷೆಗಳ ಶಬ್ದಗಳ ಪ್ರಯೋಗವನ್ನೂ ಕೆಲವೊಮ್ಮೆ ಮಾಡಿದಲ್ಲಿ ನಷ್ಟವೇನು ? ಉದಾ : ರೈಲ್ವೇಯಾನಮ್, ಬಸ್‌ವಾಹನಮ್, ಚೆಕ್‌ಪತ್ರಮ್.

ಈ ವಿಷಯದಲ್ಲಿ ಧೀಮಂತರು ಪ್ರಯತ್ನಿಸಿದುದೂ ಉಂಟು. ಈ ಪುಸ್ತಕಗಳು ಗಮನಿಸಬೇಕಾದುವು :

1. ಡಾ॥ ರಘುವೀರರವರು ಸಂಪಾದಿಸಿದ ವ್ಯವಹಾರ ಕೋಶ.
2. ಮಹಾಪಂಡಿತ ರಾಹುಲ ಸಾಂಕೃತ್ಯಾಯನರು ಸಂಪಾದಿಸಿದ ಕೋಶ.
3. ಹಿಂದೂ ಸೇವಾ ಪ್ರತಿಷ್ಠಾನದವರು ಹೊರತಂದಿರುವ ವ್ಯವಹಾರ ಕೋಶ.

ಸಂಶೋಧನ

ವಿಶ್ವವಿದ್ಯಾಲಯಗಳಲ್ಲಿ Ph.D. ಪದವಿಯನ್ನು ಹೊಂದಲು ಪದವೀಧರರಿಗೆ ಸಂಶೋಧನಾವಕಾಶವಿದೆ. ಆದರೆ ಸಾಂಪ್ರದಾಯಿಕ ಮಹಾಪಾಠಶಾಲೆಗಳಲ್ಲಿ ವಿದ್ವಾಂಸರಿಗೆ ಈ ಅವಕಾಶವನ್ನು ಮಾಡಿಕೊಟ್ಟಿಲ್ಲ. ಈ ಪಕ್ಷಪಾತವು ಏಕೆಂದು ನಮಗೆ ಅರ್ಥವಾಗುತ್ತಿಲ್ಲ. ಸಂಶೋಧನ ಪ್ರಬಂಧಗಳಾದರೂ ಹೆಚ್ಚಿನ ಮಟ್ಟಿಗೆ ಕಾವ್ಯಗಳು-ಅಲಂಕಾರ ಶಾಸ್ತ್ರಗಳಷ್ಟಕ್ಕೇ ಸೀಮಿತವಾಗುತ್ತಿರುವುದೂ ಕಾಣುತ್ತದೆ. ವೈದಿಕವಾಙ್ಮಯದಲ್ಲಿ, ಸಾಂಖ್ಯ ಮುಂತಾದ ದರ್ಶನಗಳಲ್ಲಿ, ವಿಶೇಷವಾಗಿ ಜೈನ-ಬೌದ್ಧಸಿದ್ಧಾಂತಗಳನ್ನು ಕುರಿತಾಗಿ ಸಂಶೋಧನವು ಹೆಚ್ಚುಕಡಿಮೆ ವಿರಳವೇ ಆಗಿಬಿಟ್ಟದೆ. ವೇದವೆಂಬುದು ಭಗವಂತನೇ ನಿರ್ಮಿಸಿದ ಕಾವ್ಯವೆಂಬ ಅಭಿಪ್ರಾಯ ದಿಂದ 'ದೇವಸ್ಯ ಪಶ್ಯ ಕಾವ್ಯಂ' ಎನ್ನುತ್ತದೆ, ಅಥರ್ವವೇದದ ಒಂದು ಮಂತ್ರ. ಆಲಂಕಾರಿಕರು ಕಲ್ಪಿಸಿರುವ ಎಲ್ಲ ಅಲಂಕಾರಗಳೂ ಧ್ವನಿಪ್ರಕಾರಗಳೂ ವೇದಗಳಲ್ಲಿ ದೊರಕುವುವೇ. ಇಲ್ಲಿ ಸಂಶೋಧನೆಗೆ ವಿಷಯವಿಲ್ಲವೇನು ? ವೇದಗಳಲ್ಲಿ ರಾಷ್ಟ್ರೀಯ ಭಾವನೆ, ಗಣರಾಜ್ಯಪ್ರಕಾರ, ವೈದಿಕ ಸಂಸ್ಕೃತಿ, ಇಂದಿನವರೂ ಒಪ್ಪುವ ವಿಜ್ಞಾನ—ಇವೇ ಮುಂತಾದ ಹಲವು ಅಂಶಗಳು ಸಂಶೋಧ್ಯವಾಗಿಯೇ ಉಳಿದಿವೆ. ಛಂದೋಽಧಿಕಾರದಲ್ಲಿ ಆಚಾರ್ಯ ಪಾಣಿನಿಯು ಹೇರಳವಾಗಿ ಶಬ್ದಗಳನ್ನು ವ್ಯುತ್ಪಾದಿಸಿದ್ದಾನೆ. ಅವಲ್ಲಿ ಎಷ್ಟು ಶಬ್ದಗಳು ವೇದಗಳಲ್ಲಿ ಲಭ್ಯ, ಎಷ್ಟಲ್ಲವೆಂಬುದಿಂದಿಗೂ ನಿರ್ಣೀತವಾಗಿಲ್ಲ.

ಮತ್ತೇನೆಂದರೆ, ಸಾಗರದಂತೆ ವಿಶಾಲವೂ, ಆಳವೂ, ಆಗಿರುವ ಈ ಸಂಸ್ಕೃತ ಸಾಹಿತ್ಯದಲ್ಲಿ 'ವೈಜ್ಞಾನಿಕವಿಚಾರಗಳು ದುರ್ಲಭ, ಸಂಸ್ಕೃತಗ್ರಂಥಗಳು ಕೇವಲ ಶ್ರದ್ಧಾಜಾಡ್ಯವನ್ನೇ ಹುಟ್ಟಿಸಿಯಾವು' ಎಂಬೊಂದು ಬೇರು ಬಿಟ್ಟಿರುವ ಅಪವಾದದ ಮಾತುಂಟು. ಈ ಅಪವಾದವನ್ನು ಅಳಿಸಿಹಾಕಲು ಸಂಶೋಧಕರು ಎಷ್ಟು ಪ್ರಯತ್ನವನ್ನು ತಾನೆ ಮಾಡಿದ್ದಾರೆ? ಶ್ರೀ ದಯಾನಂದ ಸರಸ್ವತೀ ಮಹೋದಯರು ಈ ಅಪವಾದವನ್ನು ಕಿತ್ತೊಗೆಯಲು ಸ್ವಲ್ಪ ಪ್ರಯತ್ನಿಸಿದರು. ಅದನ್ನು ಉತ್ಪಾಟನೆ ಮಾಡುವ ದಾರಿಯನ್ನು ತೋರಿದರು. 'ಸನಾತನ ವಿಜ್ಞಾನ ಸಮುದಯಃ' ಎಂಬ ಹೆಸರಿನ ಶ್ರೀ ವೆಂಕಟರಮಣಯ್ಯವಿರಚಿತ ಗ್ರಂಥವನ್ನು ನೋಡಬೇಕು. ಅಲ್ಲಿ ಭೌತವಿಜ್ಞಾನ (Physics), ರಸಾಯನ ಶಾಸ್ತ್ರ (Chemistry), ಸಸ್ಯವಿಜ್ಞಾನ (Botany), ಪ್ರಾಣಿ ವಿಜ್ಞಾನ (Zoology), ಶರೀರ ವಿಜ್ಞಾನ (Physiology) ಎಂಬುದಾಗಿ ವಿಜ್ಞಾನದ ಆರು ಪ್ರಕಾರಗಳಲ್ಲಿ ಪ್ರಾಚೀನ ಭಾರತೀಯರು ಅರಿತಿದ್ದ ವಿಷಯವನ್ನು ಸಂಗ್ರಹವಾಗಿ ನಿರೂಪಿಸಿದೆ.

ಸೂರ್ಯನಿಗೆ ಉದಯಾಸ್ತಗಳಿಲ್ಲವೆಂಬುದನ್ನು ಛಾಂದೋಗ್ಯೋಪನಿಷತ್ತಿನಲ್ಲಿ ಸ್ಪಷ್ಟವಾಗಿಯೇ ಹೇಳಿದೆ.

ನೈವೋದೇತಾ ನಾಸ್ತಮೇತಾ ಏಕಲ ಏವ ಮಧ್ಯೇ ತಿಷ್ಠತಿ । (3-11)

ಚಂದ್ರಗ್ರಹಣಕ್ಕೆ ಕಾರಣ ಭೂಮಿಯ ಛಾಯೆಯೇ, ಅಂತೆಯೇ ಸೂರ್ಯ ಗ್ರಹಣಕ್ಕೆ ಚಂದ್ರನು ಕಾರಣ—ರಾಹುವಲ್ಲ ಎಂಬುದಾಗಿ ವರಾಹಮಿಹಿರನು ಸ್ಪಷ್ಟವಾಗಿಯೇ ಬೃಹತ್ ಸಂಹಿತೆಯಲ್ಲಿ ಹೇಳಿದ್ದಾನೆ.

'ಭೂಚ್ಛಾಯಾಂ ಸ್ವಗ್ರಹಣೇ ಭಾಸ್ಕರಮರ್ಕಗ್ರಹೇ ಪ್ರವಿಶತೀಂದುಃ ॥ '
'ರಾಹುರಕಾರಣಮಸ್ಮಿನ್ನಿತ್ಯುಕ್ತಃ ಶಾಸ್ತ್ರಸದ್ಭಾವಃ ॥'ಎಂದು.

ಭೂಮಿಯು ಆಕಾಶ ಮಧ್ಯದಲ್ಲಿ ಶಕ್ತಿವಿಶೇಷದಿಂದ ನಿಂತಿದೆ, ದಿಗ್ಗಜಗಳಿಂದ ಹೊರಲ್ಪಟ್ಟಿದೆಯೆಂದಲ್ಲವೆಂದೂ ಅವನೇ ಹೇಳಿದ್ದಾನೆ—

ಮೇಧೀಭೂತಾ ಖಮಧ್ಯಸ್ಥಾ ॥

ಚಂದ್ರನಲ್ಲಿ ಕಂಡುಬರುವ ಕಲೆಯು ಭೂಮಿಯ ಛಾಯೆಯೆಂಬುದನ್ನು ಕಾಳಿದಾಸನು ರಘುವಂಶದಲ್ಲಿ ಸ್ಪಷ್ಟವಾಗಿಯೇ ಹೇಳುತ್ತಾನೆ.

ಛಾಯಾ ಹಿ ಭೂಮೇಃ ಶಶಿನೋ ಮಲತ್ವೇನಾರೋಪಿತಾ ಶುದ್ಧಿಮತಃ
ಪ್ರಜಾಭಿಃ ॥—(ರಘು 14-40)

ಛಾಂದೋಗ್ಯದಲ್ಲಿ ತ್ರಿವೃತ್‌ಕರಣವನ್ನು ಹೇಳುವ ಪ್ರಸಂಗದಲ್ಲಿ ಕೆಂಪು, ಕಪ್ಪು, ಬಿಳಿ—ಈ ಮೂರೇ 'ರೂಪ'ಗಳು ಎಂಬುದನ್ನೂ ಹೇಳಿದೆ. ರೂಪವೆಂದರೆ ಬಣ್ಣ. ಮೂರು ಬಣ್ಣಗಳೇ ಮೂಲಭೂತವಾದುವು. ಇವುಗಳಿಂದ ಬೇರೆಯಾಗಿ

ತೋರುವ ಹಸಿರು ಮುಂತಾದ ಬಣ್ಣವೆಲ್ಲ ಈ ಮೂರು ಬಣ್ಣಗಳ ಸಮ್ಮಿಶ್ರಣವೇ ಎಂಬುದಾಗಿ ಆದರ ಮೇಲಿನ ಶಾಂಕರಭಾಷ್ಯದಿಂದ ತಿಳಿದುಬರುತ್ತದೆ. ವೈಜ್ಞಾನಿಕರ Tricolour Theoryಯನ್ನೇ ಇದು ವ್ಯಂಜಿಸುತ್ತದೆಂಬುದು ಸ್ಪಷ್ಟ. ಈ ದಿಕ್ಕಿನಲ್ಲಿ ಪ್ರಾಚೀನ ಭಾರತೀಯರ ವಿಜ್ಞಾನದ ತಿಳಿವಳಿಕೆಯೆಷ್ಟಿತ್ತೆಂಬುದನ್ನು ಅರಿಯಲು ಸಂಶೋಧನಕ್ಕೆ ವಿಸ್ತಾರವಾದ ಅವಕಾಶವಿದ್ದೇ ಇದೆ.

ಆಲಂಕಾರಿಕರ ಕರ್ತವ್ಯಶೇಷ

ಇನ್ನು ಮತ್ತೊಂದು ವಿಷಯ ನನ್ನ ಹೃದಯವನ್ನು ಸದಾ ನೋಯಿಸುತ್ತಿರುವಂತಹುದು: ಏನೆಂದರೆ ಪಂಡಿತರಾಜ ಜಗನ್ನಾಥನು ಬರೆದ ರಸಗಂಗಾಧರವೆಂಬ ಅಲಂಕಾರ ಗ್ರಂಥವು ದುರ್ದೈವದಿಂದ ಅರ್ಧಕ್ಕೇ ನಿಂತಿದೆ, ಪೂರ್ಣವಾಗಿಲ್ಲ. ಅಲಂಕಾರಶಾಸ್ತ್ರಗಳಿಗೆಲ್ಲಾ ಶಿರಃಪ್ರಾಯವಾದ ಈ ಗ್ರಂಥರತ್ನವು ಉತ್ತರಾಲಂಕಾರದವರೆವಿಗೆ ಮಾತ್ರ ದೊರೆಯುತ್ತದೆ. ಅದಕ್ಕೆ ಉದಾಹರಣೆಯಾಗಿ ಕೊಟ್ಟಿರುವ ಶ್ಲೋಕವೂ ಅಪೂರ್ಣವೇ ಆಗಿಕೊಂಡಿದೆ. ಇಂದಿಗೂ ಸಹ ಅಲಂಕಾರ ಶಾಸ್ತ್ರದಲ್ಲಿ ನಿಷ್ಣಾತರೆನಿಸುವ ವಿದ್ವದ್ವರಿಷ್ಠರಿದ್ದೇ ಇದ್ದಾರೆ. ಆದರೆ ಅದಾರೂ ರಸಗಂಗಾಧರವನ್ನು ಪೂರೈಸಲು ಯತ್ನಿಸಿದುದೇ ಇಲ್ಲ. ಭೋಜರಾಜನ ಚಂಪೂ-ರಾಮಾಯಣ, ಭವಭೂತಿಯ ಮಹಾವೀರಚರಿತ, ಬಾಣನ ಕಾದಂಬರೀ—ಎಂಬೀ ಮೂರು ಕಾವ್ಯಗಳು ಹೀಗೆಯೇ ಅರ್ಧವಿದ್ದವೇ. ಅವನ್ನು ಈ ಹಿಂದಿನವರು ಪೂರೈಸಿದರೆಂಬುದನ್ನು ಸ್ಮರಿಸಬೇಕು.

ಸರಕಾರದ ಕರ್ತವ್ಯ

ಕರ್ಣಾಟಕ ಸರಕಾರವು ಸಂಸ್ಕೃತಾಧ್ಯಯನಕ್ಕೆ ಯೋಗ್ಯವಾದ ಪ್ರೋತ್ಸಾಹವನ್ನು ಕೊಟ್ಟಿದೆಯೆಂಬಂಶವನ್ನು ಈ ಹಿಂದೆ ತಿಳಿಸಿದ್ದಾಗಿದೆ. ಅದಕ್ಕಾಗಿ ನಾನು ಧನ್ಯವಾದಪೂರ್ವಕವಾದ ಅಭಿನಂದನೆಗಳನ್ನು ಸಮರ್ಪಿಸುತ್ತೇನೆ. ನಮ್ಮ ಮತ್ತೊಂದು ಪ್ರಾರ್ಥನೆಯಿದೆ: ಈ ರಾಜ್ಯದಲ್ಲಿ ಎಲ್ಲಾ ಪ್ರೌಢಶಾಲೆಗಳಲ್ಲೂ ಸಂಸ್ಕೃತಾಧ್ಯಯನಕ್ಕೆ ಅವಕಾಶವಿರುತ್ತಿಲ್ಲ. ಹೊಸದಾಗಿ ಆರಂಭವಾಗುತ್ತಿರುವ ಶಾಲೆಗಳಲ್ಲಿಯೂ ಈ ವಿಷಯವನ್ನು ಪರಿಶೀಲಿಸುವುದು ಸಹ ಇಲ್ಲವೆಂಬುದು ಖೇದನೀಯ. ಆದ್ದರಿಂದ:

1. ಎಲ್ಲಾ ಪ್ರೌಢಶಾಲೆಗಳಲ್ಲೂ ಸಂಸ್ಕೃತಾಧ್ಯಯನಕ್ಕೆ ಅವಕಾಶವನ್ನು ಅವಶ್ಯವಾಗಿಯೂ ಕಲ್ಪಿಸತಕ್ಕದ್ದು.

2. ಈಗ ಅನೇಕ ಹೈಸ್ಕೂಲುಗಳಲ್ಲಿ ಸಂಸ್ಕೃತವಿರುವ ಕಡೆಗಳಲ್ಲೂ ಸಹ ಸಂಸ್ಕೃತಾಧ್ಯಾಪಕರ ಸ್ಥಾನವನ್ನು ಭರ್ತಿಮಾಡಿಯೇ ಇಲ್ಲ. ಈಗಾಗಲೇ ಸುಮಾರು ಕಾಲದಿಂದ ಖಾಲಿಯಿರುವ ಈ ಹುದ್ದೆಗಳನ್ನು, ಅಧ್ಯಾಪಕರನ್ನು ಗೊತ್ತುಮಾಡಿ ಭರ್ತಿಮಾಡತಕ್ಕದ್ದು.

3. ಎಲ್ಲಾ ಜೂನಿಯರ್ ಕಾಲೇಜುಗಳಲ್ಲೂ ಸಂಸ್ಕೃತಾಧ್ಯಯನಕ್ಕೆ ಅವಕಾಶವನ್ನು ಅವಶ್ಯವಾಗಿ ಕಲ್ಪಿಸುವುದು.

4. ಸಂಸ್ಕೃತ ವಾಙ್ಮಯದ ಪೋಷಣೆ ಹಾಗೂ ಉತ್ತೇಜನಕ್ಕಾಗಿ ಸಂಸ್ಕೃತ ಪ್ರತಿಷ್ಠಾನ (Sanskrit Academy)ವೊಂದರ ನಿರ್ಮಾಣ.

5. ಜಮ್ಮು, ನವದೆಹಲಿ, ಗುರುವಾಯೂರು, ತಿರುಪತಿ—ಈ ಎಡೆಗಳಲ್ಲಿ ಹೇಗೋ ಹಾಗೆ ಕೇಂದ್ರೀಯ ವಿದ್ಯಾಪೀಠವೊಂದನ್ನು ಇಲ್ಲಿ ಸ್ಥಾಪಿಸತಕ್ಕದ್ದು.

ಸಂಸ್ಕೃತಜ್ಞರ ಕರ್ತವ್ಯವಿಶೇಷ

ಸಂಸ್ಕೃತಜ್ಞರಲ್ಲಿ, ವಿಶೇಷವಾಗಿ ಅಧ್ಯಾಪಕರಲ್ಲಿ ನನ್ನ ಇದೊಂದು ಪ್ರಾರ್ಥನೆ. ಸೌಹಾರ್ದದಿಂದ ಮಾಡುತ್ತಿರುವ ಇದನ್ನು ಸಹೃದಯತೆಯಿಂದಲೇ ಸ್ವೀಕರಿಸೋಣ ವಾಗಲಿ. ಕಲಿತ ಶಾಸ್ತ್ರವೇನೇ ಇರಲಿ, ಅದು ಮತ್ತೆ ಮತ್ತೆ ಅವಲೋಕನದಿಂದಲೇ ದೃಢವಾಗತಕ್ಕದ್ದು. ಪ್ರವಚನದಿಂದ ಅಧ್ಯಯನಪರಂಪರೆಯನ್ನು ಕಾಪಾಡಬೇಕಷ್ಟೆ. ಶಿಕ್ಷಕರು ಆಲಸ್ಯವನ್ನು ಬಿಟ್ಟು ಸಂಸ್ಕೃತ ಪ್ರಚಾರಕ್ಕಾಗಿ ತಮ್ಮನ್ನು ತಾವೇ ತೊಡಗಿಸಿ ಕೊಳ್ಳಬೇಕು.

ಅಖಿಲ ಕರ್ಣಾಟಕ ಸಂಸ್ಕೃತ ಪರಿಷತ್ತು 'ಸಂಸ್ಕೃತತರಂಗಿಣೀ' ಎಂಬ ಮಾಸ-ಪತ್ರಿಕೆಯನ್ನು ಈಗ ಪ್ರಕಾಶಪಡಿಸುತ್ತಿದೆ. ಅದು ಬೇಕಾದರೆ ಪರಿಷತ್ತಿನ ಮುಖ ಪತ್ರವೇ ಆಗಿದ್ದುಕೊಳ್ಳಲಿ. ವಿದ್ವಾಂಸರಿಗೆ ಪ್ರಿಯವಾಗುವ ಮತ್ತೊಂದು ಪರಿಷತ್ ಪತ್ರಿಕೆಯನ್ನು ತರಬೇಕೆಂದು ನನಗೆ ತೋರುತ್ತದೆ. ಅದು ತ್ರೈಮಾಸಿಕವೋ, ಷಾಣ್ಮಾಸಿಕವೋ ಆಗಿರಲಿ ಪರವಾಗಿಲ್ಲ. ಅದರಲ್ಲಿ ಪಾಂಡಿತ್ಯಪೂರ್ಣವಾದ ಮತ್ತು ಸಂಶೋಧನಾತ್ಮಕವಾದ ಪ್ರಬಂಧಗಳು ಪ್ರಕಾಶಕ್ಕೆ ಬರುವಂತಾಗಬೇಕು.

ವಿದ್ವಜ್ಜನರೇ, ಮಾನ್ಯ ಸಭಾಸದರೇ, ನನ್ನ ಮನಸ್ಸಿನಲ್ಲಿರುವುದನ್ನು ನಾನು ಇಷ್ಟು ಮಾತ್ರದಿಂದ ತೋಡಿಕೊಂಡಿದ್ದೇನೆ. ಸಂಸ್ಕೃತದ ಭವಿಷ್ಯತ್ತಿನಲ್ಲಿ ನನಗೆ ನಿರಾಶೆಯಿಲ್ಲ. ಸಂಸ್ಕೃತಾಭಿಮಾನಿಗಳಾದ ಯುವಕರು ಇಂದು ಇದ್ದಾರೆಯಷ್ಟೆ. ಅವರಲ್ಲಿ ವಿದ್ವಾಂಸರುಂಟು, ವಿವಿದಿಷುಗಳುಂಟು. ಸಂಸ್ಕೃತದ ಅಭಿವೃದ್ಧಿಗೆ ಕಂಕಣ ಕಟ್ಟಿನಿಂತಿರುವ ಕಾರ್ಯಕರ್ತರುಂಟು. ಅವರ ಮೇಲೆ ಈ ಹೊರೆಯನ್ನು ಹೊರಿಸಿದ್ದಾಗಿದೆ.

ಸನಾತನವಾದ ಸಂಸ್ಕೃತಸರಸ್ವತಿಯು ಚಿರಕಾಲ ಬೆಳಗಲಿ.

ಗುರುಶಂಕರಫಣಭೃದ್ವರಪರಿಮಾರ್ಜಿತಪಾದೇ
ಕವಿಶೇಖರನಿವಹಾರ್ಪಿತನವಮೌಕ್ತಿಕಹಾರೇ ।
ವಸುಧಾರ್ಚಿತ ಬುಧನಿರ್ಮಿತಮಣಿಚಿತ್ರಕಿರೀಟೇ
ಜಯ ಭಾರತಿ ಕರುಣೇಕ್ಷಿತಜಗತೀತಲಭಾಷೇ ॥

॥ ನಮಃ ಸರ್ವೇಭ್ಯಃ ॥

ಎನ್. ರಂಗನಾಥ ಶರ್ಮಾ
8-10-1984

ಪ್ರಭಾ ಮುದ್ರಣಾಲಯ, ಬಸವನಗುಡಿ, ಬೆಂಗಳೂರು-4.